ಶ್ರೀ ಅಕ್ಕಮಹಾದೇವಿ



ಪ್ರಸಾರಾಂಗ
...ರು ವಿಶ್ವವಿದ್ಯಾನಿಲಯ
೧೯೪೧

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ ೩೨



# ಅಕ್ಕಮಹಾದೇವಿ

ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೧೯೬೮

ಮೊದಲನೆಯ ಮುದ್ರಣ : ೧೯೪೧
ಎರಡನೆಯ ಮುದ್ರಣ : ೧೯೪೫
ಮೂರನೆಯ ಮುದ್ರಣ : ೧೯೫೬
ನಾಲ್ಕನೆಯ ಮುದ್ರಣ : ೧೯೬೨
ಐದನೆಯ ಮುದ್ರಣ : ೧೯೬೮
೩,೦೦೦ ಪ್ರತಿಗಳು







ಸಾಧಾರಣ ಪ್ರತಿ : ೨೫ ಪೈಸೆ
ಉತ್ತಮ ಪ್ರತಿ : ೩೭ ಪೈಸೆ

ಮುದ್ರಕರು :
ಶ್ರೀ ಮೀರಾ ಪ್ರಿಂಟರ್ಸ್
ಶಿವರಾಂಪೇಟೆ, ಮೈಸೂರು-೧.

ಪ್ರಕಾಶಕರು :
ಡೈರೆಕ್ಟರ್
ಪ್ರಸಾರಾಂಗ,
ಮಾನಸಗಂಗೋತ್ರಿ, ಮೈಸೂರು.

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆ ಛಾನ್ಸಲರವರಾದ ಆಳಿದ ಮಹಾಸ್ವಾಮಿಯರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ, ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆ ಮಾಡಿದರು. ಅವುಗಳಲ್ಲಿ ವಿಶೇಷವಾದುವು ಇವೆರಡು : ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣ ಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರ ದೂರ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚವರ್ಗದ ಸಂಸ್ಕೃತಿಯನ್ನು ಹರಡುವುದು.

ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ; ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತು ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ

ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸ ಮಾಲೆಗಳನ್ನು ಇಡಿಸಲಾಗುತ್ತಿದೆ. ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ : ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ. ಅದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ

ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇ ಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನುಕೊಟ್ಟು ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು.
೧೫–೮–೧೯೪೦ ಎನ್ ಎಸ್. ಸುಬ್ಬರಾವ್

# ಅರಿಕೆ

ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಆಶ್ರಯದಲ್ಲಿ ನಾನು ಕೊಟ್ಟ ಎರಡು ಉಪನ್ಯಾಸಗಳ ವಿಸ್ತೃತರೂಪ ಈ ಪುಸ್ತಕ. ಇದು ಹೀಗೆ ವಿಸ್ತೃತಗೊಂಡು ಸಾಕಾರವಾಗಿ ನಿಲ್ಲುವುದಕ್ಕೆ ಪ್ರಚಾರ ಪುಸ್ತಕಮಾಲೆಯ ಸಂಪಾದಕ ಮಂಡಲಿಯ ಆದರೋತ್ಸಾಹಗಳೂ ಅದರ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರ ಸತತವಾದ ಪ್ರೇರಣೆಯೂ ಕಾರಣಗಳು. ಈ ಸಂದರ್ಭದಲ್ಲಿ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಂಪಾದಕರಿಗೂ ಅವರ ಸಹೋದ್ಯೋಗಿಗಳಿಗೂ ಅರ್ಪಿಸುತ್ತೇನೆ.

ಈ ಪುಸ್ತಕವನ್ನು ಬರೆಯುವಾಗ ಅಕ್ಕನ ಚರಿತ್ರೆಗೆ ಸಂಬಂಧಿಸಿದ ಕೆಲವು ವಿವರಗಳನ್ನು ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು ಈ ವರ್ಷದ ಪ್ರಬುದ್ಧ ಕರ್ಣಾಟಕದ ಸಂಕ್ರಾಂತಿಯ ಸಂಚಿಕೆಗೆ ಬರೆದಿರುವ 'ಮಹಾದೇವಿಯಕ್ಕನ ಕೆಲವು ವಚನಗಳು' ಎಂಬ ಲೇಖನದಿಂದ ತೆಗೆದುಕೊಂಡಿದ್ದೇನೆ. ಹೀಗೆ ಈ ಲೇಖನವನ್ನು ಪ್ರಕಟನೆಗೆ ಮುಂಚೆಯೇ ನನ್ನ ಪುಸ್ತಕಕ್ಕೆ ಬಳಸಿಕೊಳ್ಳಲು ಅನುಮತಿಯನ್ನಿತ್ತುದಕ್ಕಾಗಿ ಶ್ರೀಮಾನ್ ಶ್ರೀಕಂಠಯ್ಯನವರಿಗೂ ಪ್ರಬುದ್ಧ ಕರ್ಣಾಟಕದ ಸಂಪಾದಕರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಇದನ್ನು ಅತಿ ಶೀಘ್ರವಾಗಿ ಪ್ರತಿಮಾಡಿ ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟ ನನ್ನ ಮಿತ್ರರಾದ ಶ್ರೀಮಾನ್ ನೊ. ಸಂ. ಶ್ರೀನಿವಾಸ ಅಯ್ಯಂಗಾರ್ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಇಂಟರ್ಮೀಡಿಯಟ್ ಕಾಲೇಜು,
ತುಮಕೂರು, ೬-೧೦-೧೯೪೧

ಎಸ್. ವಿ. ಪರಮೇಶ್ವರಭಟ್ಟ

# ವಿಷಯಸೂಚಿಕೆ

# ಅಕ್ಕ ಮಹಾದೇವಿ

## ೧. ಪ್ರವೇಶ

'ಲೋಕವೆಂಬ ಮಾಯೆಗೆ ಶರಣ ಚಾರಿತ್ರ ಮರುಳಾಗಿ ತೋರುವುದು' ಎಂದು ಅಕ್ಕ ಒಮ್ಮೆ ಮಾರ್ಮಿಕವಾಗಿ ನುಡಿದಿದ್ದಾಳೆ. ನಿಜ. ಲೋಕ ಎನ್ನುವುದು ಬಹುಭಾಗ ಮಾಯೆಯಿಂದ ಕೂಡಿದೆ. ಇಂತಹ ಮಾಯೆಯ ಪರೆಯಿಂದ ಕೂಡಿದ ಕಣ್ಣಿನ ನೋಟಕ್ಕೆ ಮಾಯೆ ಹರಿದ ಶರಣರ ಚರಿತ್ರೆ ಮರುಳೆಂಬಂತೆ ಕಾಣುವುದು. ಆದರೆ ಮಾಯೆಯ ಪರೆ ಬಿಟ್ಟ ಕಣ್ಣಿನಲ್ಲಿ ನೋಟ ನಿಚ್ಚಳವಾಗಿ ನೋಡುವ ಒಬ್ಬಿಬ್ಬರಿಗಾದರೂ ಈ ಶರಣ ಜೀವನ ಮರುಳಾಗಿ ಕಾಣಲಾರದು. ಅದರಲ್ಲೂ ಅಕ್ಕನಂತಹ ಶ್ರೇಷ್ಠ ಅನುಭಾವಿಯ ಆಧ್ಯಾತ್ಮಿಕ ಜೀವನ ಆ ನಿಲವಿನಲ್ಲಿಯೇ ನಿಂತು ನೋಡುವ ಜನಕ್ಕೆ ಮರುಳೆಂದರೆ ಒಪ್ಪುವ ಮಾತಾಗದು.

"ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ" ಎನ್ನುವುದು ಅಕ್ಕನ ಒಂದು ಮಾತು. ಇಂತಹ ಮಾತು ಇನ್ನೂ ಹಲವಿವೆ. ಈ ಮಾತಿನಲ್ಲಿಯೂ ಇತರ ಇಂತಹ ಮಾತುಗಳಲ್ಲಿಯೂ ತೋರಿ ಬರುವ ಅಕ್ಕನ ಶಿವಾನುಭವ, ಅದಕ್ಕೆ ಪೂರ್ವಭಾವಿಯಾಗಿ ಬಂದ ಮಧುರಭಾವ, ಇವು ಬೆಳೆದು ನಿಲ್ಲಲು ಊರೆಯಾಗಿ ನಿಂತ ಆಕೆಯ ಆತ್ಮಾನುಸಂಧಾನ, ದಿವ್ಯೋನ್ಮಾದ, ಚಿತ್ತಾಹ್ಲಾದ ಇವೆಲ್ಲವುಗಳ ಪರಿಚಯವನ್ನೂ ಸೂಕ್ಷ್ಮವಾಗಿ ಯಾದರೂ ನಾವು ಗ್ರಹಿಸಬಹುದು. ಗ್ರಹಿಸಲ್ಲು ಈ ಸೂಕ್ಷ್ಮ ದೃಷ್ಟಿ ಮಾತ್ರ ಆವಶ್ಯಕ. ಹೀಗೆ ಅಕ್ಕನ ಮಾತು ಹೇಳಿದ ವಿಷಯಗಳಿಗಿಂತ ಹೇಳದ ಅವೆಷ್ಟೋ ಸಂಗತಿಗಳನ್ನು ನಮ್ಮ

ಸೂಕ್ಷ್ಮದೃಷ್ಟಿಗೆ ತೆರೆದು ತೋರಿಸುತ್ತದೆ. ಎಂದಮೇಲೆ ಇಂತಹ ದಿವ್ಯ ಅನುಭಾವಿಗಳ ಜೀವನವನ್ನು ಅವರ ವಚನಗಳಿಂದಲೇ ಚಿತ್ರಿಸುವುದು ಒಂದು ಮಧುರಯಾತನೆ.

ಒಂದು ರೀತಿ ನೋಡಿದರೆ ಅಕ್ಕನ ಜೀವನ ಚರಿತ್ರೆಗೇನೂ ಕಷ್ಟವಿಲ್ಲ. ಪುರಾಣ, ದಂತಕಥೆ, ಪವಾಡ ಇವುಗಳಿಂದಲೂ, ಜೊತೆಗೆ ಚರಿತ್ರೆ, ವ್ಯಕ್ತಿಪರಿಚಯ, ಕೃತಿಪರಿಚಯ—ಇವುಗಳಿಂದಲೂ ಅವಳ ಜೀವನವನ್ನು ಸಾಧಾರವಲ್ಲದಿದ್ದರೂ ಸಾಕಾರವಾಗಿಯಾದರೂ ಬರೆಯುವುದು ಸಾಧ್ಯ. ಕೈಲಾಸದಲ್ಲಿ ಕುಪಿತಳಾದ ಪಾರ್ವತಿಯಿಂದ ಶಾಪಗ್ರಸ್ತಳಾದ ರುದ್ರಕನ್ನಿಕೆಯೊಬ್ಬಳು ಭೂಲೋಕದಲ್ಲಿ ಮಾನವಳಾಗಿ ಜನ್ಮವೆತ್ತುವಳು. ಈಕೆ ಯೌವನಾವಸ್ಥೆಗೆ ಬಂದಾಗ ತಾನು ಹುಟ್ಟಿದ ಊರಿನ ಆಳರಸನಾದ ಜೈನ (?) ದೊರೆಯೊಬ್ಬನ ದೃಷ್ಟಿಪಥಕ್ಕೆ ಬೀಳುವಳು. ಪರಿಣಾಮವಾಗಿ ತನಗಿಷ್ಟವಿಲ್ಲದಿದ್ದರೂ ತನ್ನ ವೃದ್ಧ ಮಾತಾಪಿತೃಗಳನ್ನು ಧರ್ಮಸಂಕಟಕ್ಕೆ ಸಿಕ್ಕಿಸಲು ಇಚ್ಛಿಸದೆ ಆ ಅರಸನನ್ನು ಮದುವೆಯಾಗಲು ಒಪ್ಪುವಳು. ಆದರೆ ಆ ಸಂಸಾರದ ತೊಡರು ಬಹುಬೇಗ ಬಿಡುಗಡೆಯಾಗಿ ಅಕ್ಕ ಮತ್ತೊಮ್ಮೆ ತಾನು ಎಳವೆಯಿಂದಲೂ ಬೆಳೆಸಿಕೊಂಡು ಬಂದ ಶಿವೋಪಾಸನೆಗೆ ತನ್ನ ಬದುಕನ್ನು ಮೀಸಲಾಗಿ ಇಡುವಳು. ತನ್ನ ಹೃದಯೇಶ್ವರನೂ ಆರಾಧ್ಯದೇವನೂ ಆದ ಚೆನ್ನಮಲ್ಲಿಕಾರ್ಜುನನನ್ನು ಶರಣು ಹೋಗಿ ಅವನ ಸಾಕ್ಷಾತ್ಕಾರವನ್ನೇ ಬಯಸಿ ಆ ನಿಮಿತ್ತ ಊರೂರು ತಿರುಗಿ ಬಸವ, ಅಲ್ಲಮ ಮೊದಲಾದ ಶಿವಶರಣರಿಂದ ಕಲ್ಯಾಣಕ್ಕೆ ಹೋಗಿ ಅಲ್ಲಿ ಕೆಲಕಾಲವಿದ್ದು ಭಕ್ತಿಪಂಥದ ದಾರಿಯಲ್ಲಿ, ಮೊದಲಿಟ್ಟ ದಟ್ಟಡಿಗಳನ್ನು ತಿದ್ದಿ ನಡೆದು, ಆ ಬಳಿಕ ತನ್ನ

ಇಷ್ಟದೈವವಾದ ಮಲ್ಲಿಕಾರ್ಜುನನನ್ನು ಏಕಾಂತದಲ್ಲಿ ಸಾಧಿಸಲು ಶ್ರೀ ಶೈಲಕ್ಕೆ ಬಂದು ಅಲ್ಲಿ ಬಯಲಾಗುವಳು.

ಅಸಲಿನಲ್ಲಿ ಅಕ್ಕನ ಜೀವನ ಕಥೆ ಇಷ್ಟು ಮಾತ್ರ. ಅಸಲಿಗೆ ಇಷ್ಟಿರುವ ಅಕ್ಕನ ಈ ಕಥೆ ಹಿಂದಿನ ಕವಿಗಳಾದ ಹರಿಹರ ಚಾಮರಸ ಸಿದ್ಧವೀರಣಾಚಾರ್ಯ ಚನ್ನಬಸವಾಂಕ ಮೊದಲಾದ ಕವಿಗಳ ಕೃತಿಗಳಲ್ಲಿ ಅವರವರ ರಾಗ ಸಂಸ್ಕಾರಗಳಿಗೆ ಅನುಗುಣವಾಗಿ ಬೆಳೆದು ಬಂದಿದೆ. ಎಂದಮೇಲೆ ಅಕ್ಕನ ರುದ್ರರಮಣೀಯವಾದ ಜೀವನದ ಅನುಭಾವವನ್ನು ತಿಳಿಯುವುದಕ್ಕೂ ಮಧುರ ಭಾವದ ಲಿಂಗಾಂಗ ಸಾಮರಸ್ಯದ ಮಹಿಮೆಯನ್ನು ಅರಿಯುವುದಕ್ಕೂ ಅಕ್ಕನವರು ತಮ್ಮ ಹೃದಯದ ಭಾವನೆಗಳನ್ನು ತೋಡಿಕೊಂಡಿರುವರೆಂಬಂತೆ ಅವರು ಆಡಿಕೊಂಡ ವಚನಗಳ ಜೊತೆಗೆ, ಆ ವಚನಗಳಿಂದಲೇ ಜೀವನ ಕಥೆಯನ್ನು ಊಹಿಸಲು ಅಸಾಧ್ಯವಾದ ಕಡೆಗಳಲ್ಲಿ ಮಾತ್ರ ಹರಿಹರಾದಿ ಕವಿಗಳ ಕೃತಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡರೆ ಸಾಕು. ಅದರಲ್ಲೂ ಈ ಕವಿಗಳಲ್ಲೆಲ್ಲಾ ಹರಿಹರನೇ ಕೇವಲ ಪ್ರಾಚೀನನಾದುದರಿಂದ ಅವನ ಕೃತಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಅಕ್ಕನ ಜೀವನ ಕಥೆಯನ್ನು ನೋಡುವುದು ಉಚಿತವೂ ಸೂಕ್ತವೂ ಆಗಿದೆ.

# ೨. ಅಕ್ಕನವರ ಆಧ್ಯಾತ್ಮಿಕ ಜೀವನ

೧

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚನ್ನಮಲ್ಲಿಕಾರ್ಜುನ ನೀನೊಡ್ಡಿದ ಮಾಯೆಯನಾರೂ ಗೆಲಲಾರರು.

ಅಕ್ಕನ ತಾಯಿ ತಂದೆಗಳು ಸುಮತಿ ನಿರ್ಮಲರೆಂದು ಚಾಮರಸನು ಹೇಳಿದ್ದಾನೆ. ಹರಿಹರನು ಹೇಳಿರುವಂತೆ ಅವರು ಶಿವಭಕ್ತ ಶಿವಭಕ್ತೆಯರೆಂದೂ ಇಟ್ಟುಕೊಳ್ಳಬಹುದು. ಆ ಶೈವ ದಂಪತಿಗಳಿಗೆ ಅವರ ಅವಿರಳವಾದ ಶಿವೋಪಾಸನೆಯ ಫಲವಾಗಿ ಅಕ್ಕನು ಜನಿಸಿದಳು. ಮೊದಲೇ ಮುಗ್ಧ ಶಿಶು, ಮೇಲಾಗಿ ಹೆಣ್ಣು, ಅದರಲ್ಲೂ ಶಿವಭಕ್ತೆ; ಎಂದ ಮೇಲೆ ಇವಳ ರೂಪ ಗುಣ ಸೌಂದರ್ಯಗಳನ್ನು ಬೇರೆ ಹೇಳಬೇಕಾದುದಿಲ್ಲ. ದಿವಸ ಕಳೆದಂತೆ ಹುಡುಗಿ ಬೆಳೆದು ಯೌವನಸ್ಥಳಾದಳು. ಆಗ ಸಹಜವಾಗಿ ತಾಯಿ ತಂದೆಗಳಿಗೆ ಯೋಚನೆಯಾಯಿತು. ಈ ಯೋಚನೆ ಹೆಣ್ಣು ಹಡೆದ ಎಲ್ಲ ತಂದೆತಾಯಿಗಳಿಗೂ ಬರಬಹುದಾದ ಯೋಚನೆ. ಬೆಳೆಯುತ್ತಿರುವ ಮಗಳನ್ನು ನೋಡಿ, "ಇದಾವ ಕಾಮುಕರಂ ಕೀಳ್ಮಾಡಲಿರ್ದಪುದು, ಇದಾವ ರಸಿಕರ ಭಾವವಂ ಬರಿಕೈಯ್ಯಲಿರ್ದಪುದು, ಇದಾವ ಸಜ್ಜನರಂ ನೀತಿಗೆಡಿಸಲಿರ್ದಪುದು" ಎಂದು ಚಿಂತಿಸಿದರು. ಈ ಚಿಂತೆ ಹುಡುಗಿಯ ಬೆಳವಣಿಗೆಯ ಜೊತೆಗೆ ತಾನೂ ಬೆಳೆಯುತೊಡಗಿತು. ನಿರ್ಮಲ ಸುಮತಿಯರು ಅಕ್ಕನನ್ನು ಮೋಹದಿಂದ

ಆದಕ್ಕೂ ಹೆಚ್ಚಾದ ಭಯದಿಂದ, "ಗಗನಾಂಗನೆ ಶರತ್ಕಾಲದ ಮುಗಿಲ ಮರೆಯೊಳು ಚಂದ್ರಕಳೆಯಂ ಸಲಹುವಂತೆ" ವಿಶೇಷ ರೀತಿಯ ಪ್ರೇಮೋತ್ಸಾಹಗಳಿಂದ ಸಲಹುತ್ತಿದ್ದರು.

ಅಕ್ಕನು ಹುಟ್ಟಿದ ಉಡುತಡಿ ಎನ್ನುವ ಊರನ್ನು 'ಕೌಶಿಕ' ಎಂಬ ದೊರೆ ಆಳುತ್ತಿದ್ದನು. ಈತನು ವೀರಶೈವನಲ್ಲವೆಂದು ಎಲ್ಲ ಕವಿಗಳೂ ಹೇಳಿದ್ದಾರೆ. ಆದುದರಿಂದ ಅಕ್ಕನೇ ಮೊದಲಾದ ಶಿವಶರಣರ ದೃಷ್ಟಿಯಲ್ಲಿ ಈತ 'ಭವಿ'. ಈ ಭವಿಯಾದ ಕೌಶಿಕನ ಸಹವಾಸದಿಂದಲೇ ಅಕ್ಕನು ಈ ಲೋಕದಲ್ಲಿ ಸಂಸಾರದ ಕೆಸರು ತುಳಿದಳು ಎಂದೂ ತುಳಿದರೂ ಮಿಕ್ಕವರಂತೆ ಅಲ್ಲಿಯೇ ಇರದೆ ಕಾಲು ತೊಳೆದು ಹೊರಗೆ ಬಂದಳು ಎಂದೂ ಅದೇ ವೈರಾಗ್ಯಕ್ಕೆ ಕಾರಣವಾಗಿ ಮೊದಲಿನ ಶಿವಭಕ್ತಿ ಕುಡಿವರಿದು ದಾಂಗುಡಿಯಿಟ್ಟು ಹಬ್ಬಿತೆಂದೂ ಹೇಳುತ್ತಾರೆ. ಇದರ ವಿವರ ಹೀಗೆ: ಒಂದು ದಿವಸ ಕೌಶಿಕ ಮಹಾರಾಜನು ಊರ ಹೊರಗಿನ ಕಾಡಿಗೆ ಬೇಟೆಗೆಂದು ಹೋಗಿದ್ದವನು ದಿನದ ಇಳಿಹೊತ್ತಿನಲ್ಲಿ ಬೇಟೆಯಿಂದ ಮರಳುತ್ತಿದ್ದನು. ಆಗ ವಿಶೇಷ ರೀತಿಯ ವೈಭವದಿಂದ ರಾಜಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದಾಗ ಅದನ್ನು ನೋಡಲೆಂದು ಬಹುಮಂದಿ ಕುತೂಹಲಾವಿಷ್ಟರಾಗಿ ನಿಂತು ನೋಡುತ್ತಿದ್ದರು. ಇದು ಸ್ವಾಭಾವಿಕವೇ. ಹೀಗೆ ಸಹಜವಾಗಿ ಮೆರವಣಿಗೆಯನ್ನು ಕೇವಲ ಬಾಲ್ಯಭಾವದ ಚಾಪಲ್ಯದಲ್ಲಿ ನೋಡುತ್ತಿದ್ದವರಲ್ಲಿ ಅಕ್ಕನೂ ಒಬ್ಬಳು. ಮೆರವಣಿಗೆಯನ್ನು ನೋಡುತ್ತಿದ್ದ ಅವಳ ಕಣ್ಣು ಮೆರವಣಿಗೆಯ ಕೇಂದ್ರ ವ್ಯಕ್ತಿಯಾದ ಅರಸನನ್ನು ಕಂಡಿತು. ಅರಸನು ಕೂಡ ನೆರೆದ ಜನಗಳನ್ನು ನೋಡುತ್ತಿರುವಲ್ಲಿ ಆಕಸ್ಮಿಕವಾಗಿ ಅಕ್ಕನನ್ನು ನೋಡಿದನು. ನೋಡಿದೊಡನೆ ಆ ನೋಟ ಅವಳಲ್ಲೆ ನಾಟಿತು.

ಅವಳಲ್ಲಿಟ್ಟ ನೋಟವನ್ನು ಕೀಳಲಾರದೇ ಕಿತ್ತು ಅರಸನು ಅರಮನೆಗೆ ನಡೆದನು. ಅರಸನ ಹೃದಯದಲ್ಲಿ ಅಕ್ಕನನ್ನು ವರಿಸುವ ಆಲೋಚನೆ ಮನೆ ಮಾಡಿತು. ಅಕ್ಕನಿಗಾದರೋ ಈ ವ್ಯಾಪಾರದ ಅರ್ಥ ಕೂಡ ಆಗದೆ ಅವಳು ತನ್ನ ವಯಸ್ಸಿಗೆ ಸಹಜವಾದ ಮುಗ್ಧತನವನ್ನು ಮೆರೆದು ಮನೆಗೆ ತೆರಳಿದಳು. ಅರಸನು ಸಂಧಾನಕ್ಕೆ ಪ್ರಾರಂಭಿಸಿದನು. ದೂತರಿಂದ ಮಂತ್ರಿಗಳ ವರೆಗೆ ಒಬ್ಬರ ಮೇಲೊಬ್ಬರನ್ನು ಅಕ್ಕನ ಮನೆಗೆ ಕಳುಹಿಸಿ ನಯ ಭಯಗಳನ್ನು ತೋರಿಸಿ ಅಕ್ಕನನ್ನು ಎಂತಾದರೂ ಮದುವೆ ಯಾಗಲು ನಿಶ್ಚಯಿಸಿದನು.

> " ತುಳುಂಕದ ಪೂರ್ಣಸುಖದಂತೆ, ಮಿಾಸಲಳಿಯದ ಮನೋರಥ ದಂತೆ, ಮೂಡಿದ ಭಕ್ತಿಯಂತೆ, ಕೂಡಿದ ಪೂಜೆಯಂತೆ"

ಇಲ್ಲಿಯವರೆಗೆ ಹಾಯಾಗಿ ತಂದೆ ತಾಯಿಗಳ ಎದುರಿನಲ್ಲಿ ತಾನಾ ಯಿತು ತನ್ನ ಶಿವಾನುಭವವಾಯಿತು ಎಂದು ಮಿಕ್ಕವರ ಗೊಡ ವೆಗೆ ಹೋಗದೆ ಸುಖವಾಗಿದ್ದ ಅಕ್ಕನಿಗೆ ಆ ಎಳೆಮೆಯ ಸುಖ ವನ್ನು ನುಂಗಿ ನೊಣೆಯುವ ಈ ವಿಶೇಷ ತೊಂದರೆ ಪ್ರಾಪ್ತ ವಾಯಿತು. "ಏನೆಂದೊಡಂ ಭವಿಯನೊಲ್ಲೆನೀ ಮಾತೇಕೆ" ಎಂದು ಅಕ್ಕ ಹೇಳಬಹುದಿತ್ತು : ಆದರೆ, " ಕೂಸು ಕೊಡ ದಿರ್ದೊಡೀಗಳ್ ಕೊಲಲ್ ಬೆಸಸಿದಂ " ಎಂಬ ಮಂತ್ರಿಗಳ ಹೆದರಿಕೆ ಅವಳನ್ನು ನಡುಗಿಸಿತು.

> ಎಲೆ ಮಗಳೆ ಮಗಳೆ ನಿನ್ನಯ ದೂಸರಿಂದೆಮಗೆ
> ನೆಸಿತಲ್ತು ದುರ್ಮರಣವೇನೆಂಬೆ ವೃದ್ಧರಿಗೆ
> ಹೊಸತು ನಿನ್ನಯ ಭಕ್ತಿತಾನೆಮಗೆ ಸಂಕಟಂ
> ವಸುಧೆಯೊಳು ಭವಿಯೊಳಗೆ ಬಾಳರೇನುತ್ಕಟಂ

ಕಾರಿಕಾಲಮ್ಮೆ ತಾಂ ಭವಿಯೊಡನೆ ಬಾಳಳೇ
ಹೇರೂರ ಹೆಂಗೂಸು ಭವಿಗೆ ಸತಿಯಾಗಳೇ
ಎಲೆಲೆ ವೈಜಕ್ಕವ್ವೆ ಭವಿಗೆ ಪುದುವೋಗಳೇ
ಎಲೆಲೆ ಮಾಂಗಾಯಕ್ಕ ಪಾಂಡ್ಯನೊಡಗೂಡಳೇ

ಎಂದು ತಂದೆ ತಾಯಿಗಳು ಕಾರಿಕಾಲಮ್ಮೆ ಹೇರೂರ ಹೆಂಗೂಸು, ವೈಜಕ್ಕ ಮಾಂಗಾಯಕ್ಕ ಮುಂತಾದವರ ಕಥೆಗಳನ್ನು ಉದಾಹರಿಸಿ,

"ಏಕೆಮ್ಮನೀ ವಿಧಿಗೆ ತಂದಪ್ಪೆ ಬೇಡವ್ವ, ಲೌಕಿಕದೆ ಕೌಶಿಕನ ಸಂಗಮುಂ ಮಾಡವ್ವ" ಎಂದು ಬಹು ರೀತಿಯಲ್ಲಿ ಹೇಳಿದರೆಂದು ತೋರುತ್ತದೆ. ಆಗ ಅಕ್ಕನ ಮನಸ್ಸು ಎಂತಹ ವಿಷಮ ಪರಿಸ್ಥಿತಿಗೆ ಒಳಗಾಗಿರಬೇಡ ! ತನ್ನ ಹೃದಯಮಂದಿರದಲ್ಲಿ ಆರಾಧ್ಯ ಮೂರುತಿ ಚನ್ನಮಲ್ಲಿಕಾರ್ಜುನನನ್ನು ಬಿಟ್ಟು ಕೌಶಿಕನನ್ನು ವರಿಸುವುದೆ ?

"ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಚೆಲುವಂಗಾನೊಲಿದೆನವ್ವಾ.
ಎಡೆ ಇಲ್ಲದ, ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ.
ಎಲೆ ಅವ್ವಾ ; ನೀನು ಕೇಳಾ ತಾಯೆ !
ಭವವಿಲ್ಲದ, ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು.
ಕುಲ ಸೀಮೆ ಇಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ.
ಇದು ಕಾರಣ ಚನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ.
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು."

"ಮನ ಮನ ತಾರ್ಕಣೆಯ ಕಂಡು ಅನುಭವಿಸಲು
ನೆನಹೇ ಘನವಹುದಲ್ಲದೆ ಅದು ಹವಣಲ್ಲಿ ನಿಲ್ಲುವುದೆ ?
ಎಲೆ ಅವ್ವ ! ನೀನು ಮರುಳವ್ವೆ ।
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಗೊಲಿದು ಸಲೆಮಾರುವೋದೆನು.
ನಿನ್ನ ತಾಯಿತನವನೊಲ್ಲೆ ಹೋಗೆ."

ತಾಯಿತನವನ್ನಾದರೂ ಅಕ್ಕನು ಒಲ್ಲೆನೆಂದು ಹೇಳಿಯಾಳು. ಆದರೆ ಭವಿಯ ಸಂಗವನ್ನು ಮಾತ್ರ ಒಲಿವೆನೆನ್ನದು ಅವಳ ನಾಲಗೆ. ಮೇಲೆ ಹೇಳಿರುವ ಈ ವಚನದಲ್ಲಿ ಅವಳು ಎಷ್ಟು ಸರಳವಾಗಿ, ಸುಂದರವಾಗಿ ತನ್ನ ನಲ್ಲ ಮಲ್ಲಿಕಾರ್ಜುನನನ್ನು ಭಕ್ತಿಯಿಂದ ಸಿಂಗರಿಸಿ ಹಾಡಿದ್ದಾಳೆ ಎಂಬುದು ವ್ಯಕ್ತವಾಗುತ್ತದೆ. ಆಕೆ ಶಿವನಲ್ಲಿಟ್ಟಿರುವ ಈ ಪ್ರೇಮಕ್ಕೆ ಈಗ ಬಂದೊದಗಿದ ಈ ವಿಘ್ನವನ್ನು ತಡೆಗಟ್ಟಲು ಮುಂದೆ ತಾನು ಯುತ್ನಿಸಿದ ರೀತಿಯಾದರೂ ಶಿವಶರಣೆಗೆ ತಕ್ಕುದಾದ ರೀತಿ. ಮುದುಕರಾದ ತಂದೆ ತಾಯಿಗಳನ್ನು ಆ ವಯಸ್ಸಿನಲ್ಲಿ ತನ್ನ ನಿಮಿತ್ತವಾಗಿ ದುಷ್ಟ ದೊರೆಯೊಬ್ಬನು ದಂಡಿಸುವುದು ಅಯುಕ್ತ ಎಂದು ಅಕ್ಕ ವಿಚಾರಮಾಡಿ ತಾನು ಮದುವೆಗೊಪ್ಪಿ ಮದುವೆಯಾಗಲಿರುವ ದೊರೆಯನ್ನು ಶಿವಭಕ್ತನನ್ನಾಗಿ ಪರಿವರ್ತಿಸಿ ತನ್ನ ಆಧ್ಯಾತ್ಮಿಕ ವಿಚಾರಗಳನ್ನು ಅವನಲ್ಲಿ ಬಿತ್ತುವುದಾದರೆ ತನ್ನ ನಿರ್ಮಲ ಚಾರಿತ್ರಕ್ಕೆ ಕಳಂಕವೆಲ್ಲಿಯದು ಎಂದು ಬಗೆದಳು.

ಹೀಗೆ ಬಗೆದು ಕೌಶಿಕನು ಕಳುಹಿದ ಮಂತ್ರಿಗಳನ್ನು ಕುರಿತು "ನೀವೆಂದುದಂ ಮಾಳ್ಪೆನಂತದಕ್ಕೆರಡಿಲ್ಲ. ನೀವೆನ್ನ ಮನದೊಳಿದ್ದಂತೆ ಮಾಡುವುದೆಲ್ಲ" ಎಂದು ತನ್ನ ಮನಸ್ಸನ್ನು ಬಿಚ್ಚಿ ಹೇಳಿದಳು. "ಕೌಶಿಕನನ್ನು ಮದುವೆಯಾಗಲು ಅಡ್ಡಿ ಇಲ್ಲ; ಆದರೆ ಮದುವೆಯಾದ ಮೇಲೂ ನಾನು ಶಿವಪೂಜೆಯನ್ನೂ ಗುರು ಲಿಂಗ ಜಂಗಮರ ಪೂಜೆಯನ್ನೂ ಮಾಡುತ್ತಿರುವೆನು. ಶಿವಶರಣರ ಕಥೆಗಳನ್ನೂ ಶೈವಾಗಮ ಪುರಾಣಗಳ ತತ್ವೋಪದೇಶಗಳನ್ನೂ ಕೇಳುತ್ತಿರುವೆನು. ನಿಮ್ಮ ದೊರೆ ಕೌಶಿಕನು ಈ ವಿಧವಾದ ನನ್ನ ಶಿವಾಚಾರಗಳಿಗೆ ವಿಘ್ನ ತರುವುದಾದರೆ ನಾನು ಅದನ್ನು ತಪ್ಪು ಎಂದು ಭಾವಿಸುವೆನು. ಇಂತಹ ಮೂರು ತಪ್ಪುಗಳನ್ನು ಕೌಶಿ

ಕನು ಮಾಡಿದ್ದೇ ಆದರೆ ನಾನು ಅವನನ್ನು ತ್ಯಜಿಸಿ ಹೊರಟು ಹೋಗುವೆನು" ಎಂದು ಅಕ್ಕ ಮಂತ್ರಿಗಳಿಗೆ ತನ್ನ ಮತವನ್ನು ವಿವರಿಸಿ ಅವರಿಂದ ಈ ಬಗ್ಗೆ ಓಲೆಯೊಂದನ್ನು ಬರೆಯಿಸಿಕೊಂಡು ಕಳುಹಿಸಿಕೊಟ್ಟಳು. ಮದುವೆಯ ಸಂಧಾನಕ್ಕೆಂದು ಬಂದಿದ್ದ ಅರಸುಮಂತ್ರಿಗಳೊಡನೆ ಅಕ್ಕನು ನಡೆಸಿದ ಮಾತುಕಥೆಗಳಲ್ಲಿ ತೋರಿಬರುವ ಅವಳ ಜಾಣ್ಮೆ ಬಹು ಹಿರಿದು. ತನ್ನ ನಿಬಂಧನೆ ಗಳನ್ನು ನೋಡಿ ಕೌಶಿಕನು ತನ್ನನ್ನು ಮದುವೆಯಾಗುವ ಪ್ರಸಂಗ ವನ್ನೇ ದೂರಮಾಡುವನು ಎಂದು ಅಕ್ಕ ಭಾವಿಸಿರಬಹುದು ಅಥವಾ ತನ್ನ ನಿಬಂಧನೆಗಳನ್ನು ಅನುಮೋದಿಸಿ ಅರಸು ಮದುವೆ ಯಾಗಲೊಪ್ಪಿದರೂ ಮುಂದೆ ಆತನು ತಾನಾಗಿಯೇ ಶೈವನಾಗಿ ಪರಿವರ್ತಿತನಾಗುವನೆಂದು ಅಕ್ಕ ಭಾವಿಸಿರಬಹುದು. ಹೇಗಾ ದರೂ ಈಗ ಬಂದೊದಗಿದ ಕುತ್ತಿನಿಂದ ತಾನೂ ತನ್ನ ತಂದೆ ತಾಯಿಗಳೂ ಪಾರಾಗಬೇಕು ಎಂದೂ ಊರಿಗೆಲ್ಲಾ ದೊರೆಯಾದ "ಅತಿ ವಿಷಯಿಯೂ ಅತಿ ಕೋಪಿಯೂ ನಿಷ್ಠುರನೂ" ಆದ ಕೌಶಿಕನೂ ಸುಪ್ರಸನ್ನನಾಗಬೇಕು ಎಂದೂ ಅಕ್ಕ ಈ ಹಂಚಿಕೆ ಯನ್ನು ಹೂಡಿದಳು.

ಇತ್ತ ಮಂತ್ರಿಗಳು ಬಂದು ಕೌಶಿಕನಿಗೆ ಅಕ್ಕನೊಡನೆ ತಾವು ನಡೆಸಿಕೊಂಡು ಬಂದ ಮದುವೆಯ ಮಾತುಕಥೆಗಳನ್ನು ವಿವರ ವಾಗಿ ತಿಳಿಸಿದರು. ಕೌಶಿಕನಿಗೆ ಎಲ್ಲೆ ಇಲ್ಲದ ಸಂತೋಷವಾಯಿತು. ಆತ ಅಕ್ಕನನ್ನು ಮದುವೆಯಾಗುವ ಸಂಭ್ರಮದಲ್ಲಿ ಆಕೆ ಹೇಳಿ ಕಳುಹಿಸಿದ್ದ ನಿಬಂಧನೆಗಳನ್ನು ಅಷ್ಟಾಗಿ ಗಮನಿಸದೆ ತೋರಿಕೆಗೆ ಅವುಗಳನ್ನು ಒಪ್ಪಿದವನಾಗಿ ಮದುವೆಗೆ ಅಣಿಯಾದನು. ಇದರ ಪರಿಣಾಮವಾಗಿ ಅಕ್ಕ ಕೌಶಿಕನನ್ನು ಮದುವೆಯಾಗಿ ಅವನ ಅರಮನೆಯನ್ನು ಸೇರಿದಳು. ತನ್ನ ಹಂಚಿಕೆ ತನ್ನನ್ನೇ ಸುತ್ತಿ ಕೆಡಹಿದಂತೆ ಕೌಶಿಕನ ಬಲೆಗೊಳಗಾದಳು.

ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯಮಾಡಿ
ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ
ಮನ ಬಂದುದ ಬಯಸಿ ಬೇವುತ್ತಿದ್ದೇನೆ. ಅಯ್ಯ !
ಎನ್ನ ಮನದ ನಿರಾಶೆಯ ನಿವಾರಿಸಿ ನಿಮ್ಮತ್ತ ತೋರಾ
ಚನ್ನಮಲ್ಲಿಕಾರ್ಜುನಾ

ಎಂದು ಒಳಗೊಳಗೆ ಶಿವನಲ್ಲಿ ಮೊರೆಯಿಡುತ್ತ ಅಕ್ಕ ಸಂಸಾರದಲ್ಲಿ ಕಾಲಿಟ್ಟಳು.

೩

" ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯ ! ಏವೆನೇವೆನಯ್ಯ
ಅಂದಂದಿನ ದಂದುಗಕ್ಕೆ ಏವೆನೇವೆನಯ್ಯ
ಬೆಂದ ಒಡಲ ಹೊರೆವುದಕ್ಕೆ ನಾನಾರೆ.
ಚನ್ನಮಲ್ಲಿಕಾರ್ಜುನಯ್ಯ ಕೊಲ್ಲು ಕಾಯಿ ನಿಮ್ಮ ಧರ್ಮ."

ಇಲ್ಲಿಂದ ಮುಂದೆ ಅಕ್ಕನ ಜೀವನದಲ್ಲಿ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ಏನೂ ಅರಿಯದ ಸ್ವಭಾವದ ಸರಳೆಯಾದ ಅಕ್ಕ ಕುಟಿಲೋಪಾಯಗಳಲ್ಲಿ ಚತುರನಾದ ಕಾಮುಕ ಕೌಶಿಕನ ಸಂಸಾರದ ಆವಿಗೆಯಲ್ಲಿ ಬಿದ್ದು ಬೇಯುವುದು ಇಲ್ಲಿನ ಕಥೆ. ಆಕೆ ಇಲ್ಲಿ ಕಂಡ ಪ್ರಪಂಚವಾದರೂ ಯಾವುದು ? 'ಮಾಯದ ಮದ, ಕಾಯದ ಕತ್ತಲೆ ಜೀವದ' ಜಂಜಡ. ಇವುಗಳಲ್ಲಿ ಸಿಲುಕಿದಮೇಲೆ ಆವಾಗಳೂ ಮನ ಉದರಕ್ಕೆ ಹರಿಯುವುದು, ಹೊನ್ನು ಹೆಣ್ಣು ಮಣ್ಣುಗಳು ತನ್ನವೆಂದು ಭ್ರಮಿಸುವುದು. ಅಕ್ಕನವರು ಕೆಮ್ಮನೆ ಕೆಟ್ಟುಹೋದರು. ಏನು ಮಾಡಲೂ ತೋಚದಂತಾಯಿತು. ದಿಕ್ಕು ತಪ್ಪಿದ ಹಸುಳೆಯಂತೆ ನೆಟ್ಟ ಮನಸ್ಸಿನಿಂದ ಶಿವನೊಬ್ಬನನ್ನೇ ಕುರಿತು ಹಂಬಲಿಸಿದರು.

"ಬೆಂದ. ಒಡಲ ಹೊರೆವುದಕ್ಕೆ ನಾನಾರೆ
ಚನ್ನಮಲ್ಲಿಕಾರ್ಜುನಯ್ಯ !
ಕೊಲ್ಲು ಕಾಯಿ ನಿಮ್ಮ ಧರ್ಮ."

ಹೃದಯದಲ್ಲಿ ದುಃಖ ತುಂಬಿಕೊಂಡಾಗ ಅಳು ಬಂದು ಆ ದುಃಖ ಕಣ್ಣೀರಾಗಿ ಕೋಡಿಹರಿದು ಹೋದ ಮೇಲೆ ಹೃದಯ ತಾನಾಗಿಯೇ ಹಗುರವಾಗುವುದು ಇದು ಒಂದು ರೀತಿ. ಸಾಮಾನ್ಯವಾಗಿ ಅಷ್ಟು ಪ್ರಬುದ್ಧಾತ್ಮರಲ್ಲದ ಚೇತನಗಳಾದ ಬಹುಮಂದಿ ಮಾಡುವುದು ಹೀಗೆ. ಅದಿಲ್ಲದಿದ್ದರೆ ಹೃದಯ ದುಃಖದಿಂದ ತುಂಬಿ ಭಾರವಾದಾಗ ಆ ದುಃಖ ಕಣ್ಣೀರ ಬದಲಾಗಿ ಮನದ ಮಾತಾಗಿ ಹರಿದು ಪರದೈವದಲ್ಲಿ ಅದನ್ನು ಬಿಡಿಸೆಂದು ಬೇಡಿಕೊಳ್ಳುವ ಮೊರೆಯಾಗಿ ನಿಲ್ಲುವುದು. ಆಗ ಹೃದಯವು ಹಗುರವಾಗುವುದು. ಈ ರೀತಿ ಪ್ರಬುದ್ಧ ಚೇತಸರಿಗೆ ಮಾತ್ರ ಸಾಧ್ಯ. ಅಕ್ಕ ತನ್ನ ಸಂಕಟವನ್ನು ಈ ರೀತಿ ಪರಿಹರಿಸಿ ಕೊಂಡಳೆಂದು ತೋರುತ್ತದೆ. ಈ ಸ್ಥಿತಿಯಲ್ಲಿ ಆತ್ಮಕ್ಕೆ ಕಷ್ಟವನ್ನು ಸಹಿಸುವ ಒಂದು ಸಹನಶಕ್ತಿ ಬರುತ್ತದೆ. ತಾಳ್ಮೆ ಶಾಂತಿ ಸ್ಥೈರಣೆಗಳು ಜೀವನದಲ್ಲಿ ತೋರುತ್ತವೆ.

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ !
ಸಮುದ್ರದ ತಡಿಯೊಳಗೊಂದು ಮನೆಯಮಾಡಿ ನೊರೆತೆರೆಗಳಿಗಂಜಿ
ದಡೆಂತಯ್ಯ !
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ !
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ !
ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ,
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಇದು ಜ್ಞಾನಿಯ ಸಮಾಧಾನದಿಂದಾದ ಅಲೌಕಿಕ ಶಾಂತಿ. ಇದನ್ನು ಅಜ್ಞಾನಿಯಾದ ಕೌಶಿಕನು ತಪ್ಪು ತಿಳಿವಳಿಕೆಯಿಂದ ತನ್ನ ವಿಷಯದಲ್ಲಿ ಅಕ್ಕನು ಈಗ ಸುಪ್ರಸನ್ನತೆಯನ್ನು ಹೀಗೆ ಪ್ರಕಟಿಸಿದ್ದಾಳೆ ಎಂದು ಭಾವಿಸಿ ಪ್ರೇಮವನ್ನು ಪ್ರಕಟಿಸುವನು. ಆಗ ಅಕ್ಕ—

ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ !
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ !

ಎಂದು ಅವನನ್ನು ಎಚ್ಚರಿಸಿರಬೇಕು. ಹೀಗೆ ಎಚ್ಚರ ಮರವಿನ ಬಯಲಾಟಗಳು ಅದೆಷ್ಟೋ ನಡೆದು ಹೋಗಿರಬೇಕು. ಅಕ್ಕನ, ಕೌಶಿಕನ ಸಂಸಾರದಲ್ಲಿ ಇಂತಹ ಹಗರಣದ ಪ್ರಕರಣ ಬಂದುದಕ್ಕೆ ಅವರ ವಚನಗಳಿಂದಲೇ ಸಾಕಾರವಾಗಿ ಇನ್ನೊಂದು ದೃಶ್ಯವನ್ನು ಜೋಡಿಸಬಹುದು.

ಕಾಮುಕನಾದ ಕೌಶಿಕನಿಗೆ ಅಕ್ಕನ ಆಧ್ಯಾತ್ಮಿಕ ವೃತ್ತಿ ಸರಿಬೀಳಲಿಲ್ಲ. ಹಾಗೆಂದು ಬಲಾತ್ಕಾರ ಮಾಡುವ ಅರಸಿಕನವನಲ್ಲ. ರೂಪವತಿಯೂ ಗುಣವತಿಯೂ ಆದ ಅಕ್ಕ ಒಲಿದು ಬರಬೇಕೆಂದು ಅವನ ಬಯಕೆ. ಅದಕ್ಕಾಗಿ ಆತ ಇನ್ನೊಂದು ಹಂಚಿಕೆಯನ್ನು ಹೂಡಿದನು. ತನ್ನ ಅಂತಃಪುರದ ರಸಿಕಸಖಿಯರನೇಕರನ್ನು ಅಕ್ಕನ ಮನಸ್ಸನ್ನು ತಿದ್ದಿ ಅವಳನ್ನು ತನ್ನ ಕಡೆಗೆ ಒಲಿಸಿಕೊಡುವ ಪವಿತ್ರ ಕಾರ್ಯಕ್ಕೆ ನಿಯೋಗಿಸಿದನು. ಈ ಗೆಳತಿಯರು ಅಕ್ಕನ ಸುತ್ತಲೂ ನೆರೆದು ಆವಳ ಮುಂದೆ ಕೌಶಿಕನ ಗುಣಗಾನ ಮಾಡಿದರು. ಆಗಲೂ ಆಕೆ ಕೌಶಿಕನನ್ನು ತಿರಸ್ಕರಿಸಿ ಚನ್ನಮಲ್ಲಿಕಾರ್ಜುನನ ಮೇಲೆ ತನಗಿದ್ದ ಅವಿರಳ ಪ್ರೇಮವನ್ನು ಕುರಿತು ಹೀಗೆ ಹಾಡಿದಳು.

"ಗಿರಿಯಲ್ಲದೆ ಹುಲುಮೊರಡಿಯಲ್ಲಾಡುವುದೆ ನವಿಲು !
ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ ?
ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ ?
ಎನ್ನ ದೇವ ಚನ್ನಮಲ್ಲಿಕಾರ್ಜುನನಲ್ಲದೆ, ಅನ್ಯಕ್ಕೆಳಸುವುದೇ
ಎನ್ನ ಮನ ಕೇಳಿರೆ ಕೆಳದಿಯರಿರಾ ? "

ಕೆಳದಿಯರ ಮೂಗು ಮುರಿದಂತಾಯಿತು. ಕೆಲವರು ಸುಮ್ಮ ನಿದ್ದರು. ಮತ್ತೆ ಕೆಲವರು ಚನ್ನಮಲ್ಲಿಕಾರ್ಜುನನಿಗಾಗಿ ಈಕೆ ಪಡುವ ವಿಪ್ರಲಂಭವನ್ನು ಹೀಯಾಳಿಸಿರಬೇಕು. ಆದಕ್ಕೆ ಉತ್ತರ ವೆಂಬಂತೆ

"ಬಂಜೆ ಬೇನೆಯನರಿಯಳು ಬಲತಾಯಿ ಮುದ್ದ ಬಲ್ಲಳೇ ?
ನೊಂದ ನೋವ ನೋಯದವರೆತ್ತ ಬಲ್ಲರು, ಚನ್ನಮಲ್ಲಿಕಾರ್ಜುನ ?
ನೀನಿರಿದಲಗು ಒಡಲಲ್ಲಿ ಮುರಿದು ಹೊರಳುವಳ
ನೀವೆತ್ತ ಬಲ್ಲಿರೆ ಎಲೆ ತಾಯಿಗಳಿರಾ ?"

ಎಂದು ಕಣ್ಣೀರು ಸುರಿಸಿ ಹುಯ್ಯಲಿಡುವಳು. ಇಂತಹ ವಚನ ಗಳಲ್ಲೆಲ್ಲಾ ನಾವು ಕಾಣುವುದು ಅಕ್ಕ ಮಲ್ಲಿಕಾರ್ಜುನನಲ್ಲಿ ಟ್ಟಿರುವ ಅವ್ಯಾಜವಾದ ಪ್ರೇಮವನ್ನು. ಆ ಪ್ರೇಮ ಸಿದ್ಧಿಸದೆ ಹೋದಂದು ತೋರಿಬರುವ ವಿರಹವನ್ನು. ಇಂತಹದೇ ಇನ್ನೊಂದು ವಚನದಲ್ಲಿ ಇದೇ ಭಾವ ಹೆಪ್ಪುಗಟ್ಟಿರುವುದನ್ನು ಕಾಣಬಹುದು.

"ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳಗುಂದದರಿಸಿನವೆನಗೆ,
ದಿಗಂಬರವೇ ದಿವ್ಯಾಂಬರವೆನಗೆ–ಶಿವಪಾದರೇಣುವೆ ಅನುಲೇಪನವೆನಗೆ,
ರುದ್ರಾಕ್ಷಿಯೆ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ ;
ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಅನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ.
ಎನಗೆ ಬೇರೆ ಶೃಗಾರವೇಕೆ ಹೇಳಿರವ್ವಾ ?"

ಇಂತಹ ವ್ಯಂಗ್ಯೋಕ್ತಿಯಿಂದ ಈ ಹಗರಣ ಕೊನೆಗೊಂಡಿರ ಬೇಕು.

ಕೌಶಿಕನ ರಾಣೀವಾಸದಲ್ಲಿ ಆಕ್ಕನು ಇಂತಹ ದುಂದುಗದ ದಿನಗಳನ್ನೆಷ್ಟೊ ನೂಕಿರಬೇಕು. ಮಾಡುವುದೇನು ? "ಚನ್ನ

ಮಲ್ಲಿಕಾರ್ಜುನ ಕಟ್ಟಿಕೆಡಹಿದ ಮಾಯೆ” ಅಂತಹುದು. “ಬಿಟ್ಟೆನೆಂದರೆ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿತ್ತು ಮಾಯೆ.” ಆದರೂ ದೇವಿ ಇದರ ಕಡೆಗೆ ಹೆಚ್ಚು ಆಸ್ಥೆವಹಿಸಲಿಲ್ಲ. “ಚನ್ನಮಲ್ಲಿಕಾರ್ಜುನ ಒಲಿದ ಶರಣಂಗೆ ಮಾಯೆ ಇಲ್ಲ, ಮರವಿಲ್ಲ’ ಅಭಿಮಾನವೂ ಇಲ್ಲ.” ಎಂದಮೇಲೆ ಈ ಮಾಯೆಗೆ ಅಕ್ಕ ಅಂಜಿದಳೆಂದಲ್ಲ. ಅಂಜಿಕೆ ಇಲ್ಲದಿದ್ದರೂ ಈ ಮಾಯೆಯ ನಂಜು ಸಹಿಸುವುದು ಏಕೆಂದು ಅವಳ ಪ್ರಶ್ನೆ. ಇದಕ್ಕೆ ಉತ್ತರ ಬಹುಶಃ ಅವಳ ಇಷ್ಟ ದೈವ ಕೊಡಬೇಕಿತ್ತು. ಆ ದೈವ ಅವಳಿಗೆ ಸುಪ್ರಸನ್ನವಾಗುವುದು ಅಷ್ಟು ಸುಲಭವಾಗಿರಲಿಲ್ಲ.

“ಆಲಿಸೆನ್ನ ಬಿನ್ನಪವ ಲಾಲಿಸೆನ್ನ ಬಿನ್ನಪವ
ಪಾಲಿಸೆನ್ನ ಬಿನ್ನಪವ ಏಕೆನ್ನ ಮೊರೆಯ
ನೋಡೆನ್ನ ದುಃಖವ ಚನ್ನಮಲ್ಲಿಕಾರ್ಜುನಯ್ಯಾ ?”

‘ಎನ್ನ ಸುತ್ತಿದ ಪ್ರಪಂಚವ ಬಿಡಿಸಯ್ಯ’ ಹೀಗೆಂದು ನಿರಂತರವೂ ಶಿವನಲ್ಲಿಯೇ ಅನನ್ಯ ಭಕ್ತಿಯಿಂದ ಮೊರೆಯಿಡುವುದೊಂದೇ ತನ್ನ ಕರ್ತವ್ಯವೆಂದು ಆಕೆ ಅರಿತಿದ್ದಳು. ಅಷ್ಟೇ ಅಲ್ಲ.

“ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ !
ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯ !
ನೀನೊಲ್ಲದ ಸುಖವೇ ದುಃಖ ಕಂಡಯ್ಯ !
ಚನ್ನಮಲ್ಲಿಕಾರ್ಜುನಯ್ಯ !
ನೀ ಕಟ್ಟಿಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು.”

ಹೀಗೆ ಅಕ್ಕನು ಒಂದು ವಿಧವಾದ ತಾತ್ವಿಕ ದೃಷ್ಟಿಯಿಂದ ಶಾಂತಚಿತ್ತಳಾಗಿ ಅದೆಷ್ಟು ಅಡ್ಡಿ ಆಸಂಗತಗಳು ಬಂದರೂ ಶಿವಾನುಭವ ಶಿವಪೂಜೆ ಗುರುಪೂಜೆಗಳಲ್ಲಿ ನಿರತಳಾಗಿದ್ದಳು.

ಇಲ್ಲಿಯವರೆಗೆ ಅಕ್ಕನ ಆಧ್ಯಾತ್ಮಿಕ ಜೀವನವನ್ನು ಆಕೆಯ

ವಚನಗಳಿಂದಲೇ ಚಿತ್ರಿಸಿರುವುದು ಸರಿಯಷ್ಟೆ. ಇಲ್ಲಿಂದ ಮುಂದೆ ಆಕೆಯ ಭಕ್ತಿ ಜೀವನದ ಇನ್ನೊಂದು ಮುಖವಾದ ಗುರುಲಿಂಗ ಜಂಗಮ ಪೂಜೆಯ ವೈಭವವನ್ನು ಹರಿಹರ ಕವಿಯ ರಗಳೆಯ ಕೆಲವು ಭಾಗಗಳಿಂದ ಚಿತ್ರಿಸಬಹುದು. ಕೌಶಿಕನು ಮದುವೆಯಾದ ಮೇಲೆ ಅಕ್ಕನ ಶಿವಪೂಜಾಸಕ್ತಿ ವಿಶೇಷವಾಗಿ ಬೆಳೆಯಿತು. ಆಕೆ ಮೊದಲೆ ಶಿವಭಕ್ತೆ, ಇದರ ಮೇಲೆ ಯಾವುದೊ ನಿರ್ಬಂಧದಿಂದ ಮದುವೆಯಾದಳು; ಈ ಮದುವೆಯೆ ತನ್ನ ವೈರಾಗ್ಯಕ್ಕೆ ನಿಮಿತ್ತವಾದವಳು, ಈ ವೈರಾಗ್ಯವೆ ಬಲಿಯಬೇಕೆಂಬ ಭಾವನೆಯಿಂದ ಕೆಲವು ನಿಬಂಧನೆಗಳನೊಡ್ಡಿ ಕೌಶಿಕನ ಕೈಹಿಡಿದಳು. ಆದುದರಿಂದಲೆ ಅವಳ ಶಿವಭಕ್ತಿ ಅತಿಶಯವಾಯಿತು. ಹತ್ತೂ ದಿಕ್ಕಿನಿಂದ ಗುರು ಜಂಗಮರ ಪಡೆ ಉಡುತಡಿಗೆ ಬಂದು ಸೇರಿತು. ಇವರೆಲ್ಲರ ಆದರಾತಿಥ್ಯಗಳನ್ನೂ ಅಕ್ಕನೆ ವಹಿಸಿಕೊಂಡಳು. ಅವಳ ನಿತ್ಯ ಜೀವನದಲ್ಲಿ ಈ ವಿಧದ ಜಂಗಮ ದಾಸೋಹವೂ, ಲಿಂಗಪೂಜೆಯೂ ಬಹು ಮುಖ್ಯವಾದ ಭಾಗವಾಗಿ ಪರಿಣಮಿಸಿದವು. ಹರಿಹರ ಕವಿಯಂತೂ ಅಕ್ಕನ ಭಕ್ತಿಜೀವನದ ಈ ಭಾಗದ ಕಥೆಯನ್ನು "ರಮ್ಯೋಜ್ವಲ ಕಾವ್ಯ" ವಾಗಿ ಚಿತ್ರಿಸಿದ್ದಾನೆ. ಈ ಕೆಳಗೆ ಬಹುಮಟ್ಟಿಗೆ ಅವನ ಮಾತುಗಳನ್ನೇ ಬಳಸಿಕೊಂಡು ಅಕ್ಕನ ಲಿಂಗಪೂಜಾವೈಭವವನ್ನು ಅತಿ ಸಂಗ್ರಹವಾಗಿ ಚಿತ್ರಿಸಿದೆ

ಕೌಶಿಕನ ಮನೆಯಲ್ಲಿದ್ದಷ್ಟು ಕಾಲವೂ ಅಕ್ಕ ಪ್ರತಿದಿನವೂ ಪರಿಮಳಪೂರಿತವಾದ ನಿರ್ಮಲೋದಕದಲ್ಲಿ ಮಿಂಯುವಳು. ಬಿಳಿಯ ಬಟ್ಟೆಯನ್ನು ಉಟ್ಟು ಹೊಸದಾಗಿ ಸೌರಭವನ್ನು ಸೂಸುತ್ತಿರುವ ಇರುವಂತಿಗೆ, ಸೇವಂತಿಗೆ, ಸಂಪಿಗೆ, ಕೇತಕಿ ಮೊದಲಾದ ಹೂಗಳನ್ನು ಮುಡಿದು ತಿಲಕ ಚಂದನಾದಿಗಳಿಂದ ಅಲಂಕೃತ

ಳಾಗುವಳು. ಸ್ವಭಾವ ಸುಂದರಿಯಾದ ಆಕೆ ಮುತ್ತು ಮಾಣಿಕದ ಹಲವು ತೆರೆದ ತೊಡವುಗಳನ್ನು ತೊಟ್ಟು, ಹೊನ್ನಪಾದುಕೆ ಗಳನ್ನು ಮೆಟ್ಟಿ "ಚೆನ್ನಮಲ್ಲಿನಾಥನಲ್ಲಿಗಚಲ ಸುಖಮುನಾಂಕೆ ಗೊಟ್ಟು" ಇಂದುಧರನ ಪೂಜೆಗಾಗಿ ಪರಮಭಕ್ತೆಯೂ ಶಾಂತಿ ಯುಕ್ತೆಯೂ ಯತಿವಿರಕ್ತೆಯೂ ಆದ ಅಕ್ಕ ತನ್ನ ಪರಿವಾರದವ ರೊಂದಿಗೆ ಪೂಜಾ ಮಂದಿರವನ್ನು ಪ್ರವೇಶಿಸುವಳು. ಅಲ್ಲಿ ಸುಖಾಸೀನೆಯಾಗಿ ಚೆನ್ನನ ಪೂಜೆಗಾಗಿ ಸಜ್ಜೆಯನ್ನು ತೆಗೆ ಯುವಳು. "ಬಳ್ಳಿವರಿವ ನೇಹಮುಸುರ ಧೂಪ ಧೂಮುಮೆಸೆಯೆ ನೀಡಿ; ನಯನಕಾಂತಿರತ್ನ ರೋಚಿಯಿಂದಲಾರತಿಗಳನೆತ್ತಿ, ಭಯದ ಭಕ್ತಿಯೋಗದರಳನಿತ್ತು ಮನದೊಳೆಯ್ದೆ ಮುತ್ತಿ ಅರ್ಚಿಸುವುದರಿಂದ ಮುನ್ನಮರ್ಚನಾವಿಳಾಸಮಾ"ಗುವುದು. ಅಕ್ಕ ಬಿಟ್ಟ ಉಸಿರು ಧೂಪ, ನೆಟ್ಟ ನೋಟ ದೀಪ, ಪಟ್ಟ ಭಯ ಪುಷ್ಪ-ಹೀಗೆ ಪೂಜೆಗೆ ಮೊದಲೆ ಮಾನಸ ಪೂಜೆ ನಡೆಯುವುದು. ಆ ಬಳಿಕ ಅನನ್ಯ ಭಕ್ತಿಯಿಂದ ಅಕ್ಕನು ಈಶ್ವರನನ್ನು ಕುರಿತು ಪ್ರಾರ್ಥಿಸುವಳು: "ಗುರುವೆ ಬಾರ ಪರವೆ ಬಾರ ವರವೆ ಬಾರ ದೇವದೇವ, ಹರನೆ ಬಾರ ಸುಕೃತ ಸಾರ ಶರ್ವ ಬಾರ ಬಾರ ದೇವ."

ಹೀಗೆ ಈಶ್ವರನನ್ನು ತದೇಕಚಿತ್ತದಿಂದ ಧ್ಯಾನಿಸಿ ಆವಾಹನಂ ಗೈದು ಕರತಳಕ್ಕೆ ಬಂದು ನೆಲಸಿದ ಆವನನ್ನು ನೋಡಿ "ಹರುಷ ದಿಂದ ಉರದೊಳೆತ್ತಿ ಮುತ್ತೆ ನೋಡಿ ಮುದ್ದನಿತ್ತು ನಲ್ಲ ಸುಖಕೆ ಬಲ್ಲುದೊಂದು ಸೊಲ್ಲ ಹಾಡಿ" ಪರಿಮಳೋದಕದಿಂದ ಮಜ್ಜನ ಮಾಡಿಸಿ ವಿಧವಿಧವಾದ ಹೂಪತ್ರೆಗಳಿಂದ ಅಲಂಕರಿಸಿ ಲಿಂಗ ಮೂರುತಿಯನ್ನು ಸಿಂಗರಿಸುವ ಸಡಗರದಲ್ಲಿ ಮೈಮರೆತು "ತನ್ನ ರೂಪು ಲಿಂಗದೊಳಗೆ ಲಿಂಗರೂಪು ಹೃದಯದೊಳಗೆ" ಭಿನ್ನವಿಲ್ಲ

ದಂತೆ ತೋರಲು "ಅಂಗ ಲಿಂಗ ಸಂಗ ಸುಖ" ವನ್ನು ಅಪ್ಪುವಳು. ಕಣ್ಣಿನಲ್ಲಿ ಆನಂದ ಬಾಷ್ಪವೂ ದೇಹದಲ್ಲಿ ರೋಮಾಂಚವೂ ಕಂಠದಲ್ಲಿ ಗದ್ಗದ ಸ್ವರವೂ ತೋರಿ ಬರುತ್ತಿರಲು ಪೂಜೆಯು ಮುಂದುವರಿಯುವುದು. ವಿಧವಿಧವಾದ ಪಕ್ವಾನ್ನಗಳ ನೈವೇದ್ಯವಾದ ಮೇಲೆ ಮೃದಂಗ, ಕಹಳೆ, ಭೇರಿ, ತಮ್ಮಟೆ ಮುಂತಾದ ವಾದ್ಯಗಳು ಮೊರೆಯುತ್ತಿರಲು ಮಂಗಳಾರತಿಯನ್ನೆತ್ತುವಳು. ಗೀತಮಯವಾದ ಭಕ್ತಿಭಾವ ಪೂರ್ಣವಾದ ಸ್ತೋತ್ರಗಳನ್ನು ಹಾಡುವಳು, ಬಿನ್ನಪಗಳನ್ನು ರಚಿಸುವಳು, ನೆರೆದ ಶರಣ ಸಂದೋಹವನ್ನು ಅತಿಥಿ ಪೂಜೆಯಿಂದ ತೃಪ್ತಿಪಡಿಸುವಳು.

ಇಷ್ಟು ವೈಭವದಿಂದ ನಡೆಯುತ್ತಿದ್ದ ಅಕ್ಕನ ಶಿವಾನುಭವ ಶಿವಪೂಜೆ ಗುರುಜಂಗಮರ ಸೇವೆ ಮೊದಲಾದ ಶಿವಾಚಾರಗಳು ಭವಿಯಾದ ಕೌಶಿಕನಿಗೆ ಎಷ್ಟು ಮಾತ್ರವೂ ಸಹಿಸುತ್ತಿರಲಿಲ್ಲ. ಆದರೆ ಮಾತಿಗೆ ಕಟ್ಟುಬಿದ್ದುದರಿಂದ ಅಕ್ಕನ ಗೊಡವೆಗೆ ಹೋಗದೆ ಮತ್ತೆ ಕೆಲ ಕಾಲ ಅರಸು ಸುಮ್ಮನಿದ್ದನು, ತಾನಾಗಿಯೆ ಅಕ್ಕ ಒಲಿದು ಬರಬಹುದು ಎಂದು. ಆದರೆ ವಿಧಿಯ ಎಣಿಕೆಯೆ ಬೇರೆಯಾಗಿದ್ದಿತು. ಕಡೆಗೂ ಅಕ್ಕ ಕೌಶಿಕನ ಸಂಸಾರವನ್ನು ಬಿಟ್ಟು ಪರಮ ವಿರಕ್ತೆಯಾಗಿ ಹೊರಟು ಹೋಗುವಳು. ಹರಿಹರನ ರಗಳೆಯಲ್ಲಿ ಅಕ್ಕ ಕೌಶಿಕನನ್ನು ತ್ಯಜಿಸಿ ಹೋದ ವಿವರ ಹೀಗೆ ಬಂದಿದೆ :

ಒಮ್ಮೆ ಮಾಹೇಶ್ವರರ ತಂಡವೊಂದು ಅಕ್ಕನವರನ್ನು ಸಂದರ್ಶಿಸಬೇಕೆಂದು ಅರಮನೆಯ ಬಾಗಿಲಿಗೆ ಬಂದಿತು. ದ್ವಾರಪಾಲಕನು ಈ ಸುದ್ದಿಯನ್ನು ಅರಸನಿಗೆ ತಿಳಿಸಿದನು. ಅರಸನು ಈಗ ಸಮಯವಲ್ಲವೆಂದು ತಾನೆ ಹೇಳಿಕಳುಹಿಸಿದನು. ಈ ಮಾತು ಅಕ್ಕನ ಕಿವಿಗೆ ಮುಟ್ಟಿತು. ಆಕೆ ಅತಿ ದುಃಖಿತೆಯಾಗಿ

"ಕೆಟ್ಟೆ ಕೆಟ್ಟೆನದಾರನೆಂದಪೆ! ಶಿವಭಕ್ತರನೆ? ಜಿಂದೆ ಜಿಂಜೆ. ಶಿವ ಶಿವಾ! ಸುಡುಸುಡು, ಕೆಟ್ಟ ಭವಿಯೇ! ಫಡಫಡ ಪಚ್ಚಪಸಿಯು ಪಾತಕನೆ, ನಿನ್ನ ದೆಸೆಯಿಂ ಭಕ್ತರ ನಿಂದೆಯುಂ ಕೇಳ್ವಂತಾಪುದಿ ನ್ನೇವೆ" ಎಂದು ಅತ್ತಳು. ಕೌಶಿಕನು ಅಕ್ಕನ ಕಾಲುಗಳ ಮೇಲೆ ಬಿದ್ದು "ಸೈರಿಸುವುದು, ಒಂದು ಅಪರಾಧವಾಯಿತು," ಎಂದು ಅಂಗಲಾಚಿದನು. "ನಿನ್ನ ಮೂರು ತಪ್ಪಿನೊಳು ಒಂದು ತಪ್ಪು ಸಂದುದು, ಏಳೇಳು ಮುನಿಸಿಲ್ಲ" ಎಂದು ಅಕ್ಕನು ಕೌಶಿಕನನ್ನು ಮನ್ನಿಸಿ ಮಾಹೇಶ್ವರರನ್ನು ಸತ್ಕರಿಸಿದಳು.

ಇನ್ನೊಮ್ಮೆ ಎಂದಿನಂತೆ ಅಕ್ಕ ಲಿಂಗಪೂಜಾನಿರತಳಾಗಿದ್ದಾಗ ಕಾಮುಕನಾದ ಕೌಶಿಕನು ಅವಳನ್ನು ಮುಟ್ಟ ಬಂದನು. "ನಿನ್ನ ಎರಡು ತಪ್ಪುಗಳು ಸಂದುಹೋದುವು. ಇನ್ನು ಮುಂದಾದರೂ ಎಚ್ಚರಿಕೆಯಿಂದಿರು" ಎಂದು ಅಕ್ಕ ಗದರಿಸಿದಳು. ಇದೇ ರೀತಿಯಲ್ಲಿ ಇನ್ನೊಂದು ದಿವಸ ಗುರುಪೂಜಾನಿರತಳಾಗಿದ್ದ ಅಕ್ಕನನ್ನು ಕೌಶಿಕನು ಕೆಣಕಿ ಬರಲು ಅಕ್ಕ ಸಂಪೂರ್ಣವಾಗಿ ಅವನ ಸಹ ವಾಸವನ್ನು ತ್ಯಜಿಸಿ ಹೊರಟಳು. ಮುಂದೆ ಅಕ್ಕ ಶ್ರೀಶೈಲ ಪರ್ವತದ ಕಡೆಗೆ ಹೋಗುತ್ತಿದ್ದಾಗ ಮತ್ತೆ ಕೌಶಿಕನು ಅವಳನ್ನು ಮಾಯಾವೇಷದಿಂದ ಕೆಣಕಿದನು ಎಂದೂ ಅಲ್ಲಿಯೂ ಅಕ್ಕ ಅವನನ್ನು ಭಂಗಿಸಿ ಮುಂದುವರಿದಳು ಎಂದೂ ಹರಿಹರನು ಹೇಳಿದ್ದಾನೆ.

ಕೌಶಿಕನು ಮನೆಯನ್ನು ಬಿಟ್ಟು ಹೊರಹೊರಟಾಗ ಅಕ್ಕನ ಮನೋಭಾವ ಎಂಥದಿತ್ತು ಎಂಬುದನ್ನು ಆ ವೇಳೆಯಲ್ಲಿ ಆಕೆ ಹಾಡಿಕೊಂಡಿರಬಹುದಾದ ವಚನಗಳಿಂದ ಅರಿಯಬಹುದು.

'ಎನಗೇಕಯ್ಯ ಸಾವ ಪ್ರಪಂಚಿನ ಪುತ್ಥಳಿ, ಮಾಯಿಕದ ಮಲಭಾಂಡ, ಆತುರದ ಭವನಿಳಯ?' ಅರಮನೆಯೆಂಬ ಸೆರೆ

ಮನೆಯನ್ನು ಬಿಟ್ಟು ಬಂದ ಅಕ್ಕ ಅದರ ಸಂಪರ್ಕ ಸಂಪೂರ್ಣವಾಗಿ ತೊಡೆಯಲೆಂದು ಉಡಿಗೆ ತೊಡಿಗೆಯನ್ನು ತ್ಯಜಿಸಿಬಿಟ್ಟಳೆಂದು ತೋರುತ್ತದೆ. ನಾಚಿಕೆ ಏಕೆ, ದೋಷವೇನು ? "ಚನ್ನಮಲ್ಲಿಕಾರ್ಜುನಂಗೆ ಜಗವೆಲ್ಲ ಕಣ್ಣಾಗಿರಲು ಮುಚ್ಚುಮರೆಸುವುದೇ !" ಊಟವಸತಿಗಳ ಹಂಬಲನ್ನೂ ಅಕ್ಕ ತೊರೆದಳು.

"ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳುದೇಗುಲಗಳುಂಟು
ಚನ್ನಮಲ್ಲಿಕಾರ್ಜುನಯ್ಯ !
ಆತ್ಮಸಂಗಾತಕ್ಕೆ ನೀನೆನಗುಂಟು."

ಇದಕ್ಕಿಂತ ಹೆಚ್ಚೇನು ಬೇಕು.

"ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡಯ್ಯ.
ಏನುಮಾಡಿದಡೆಯು ನಾನಂಜುವವಳಲ್ಲ.
ತರಗೆಲೆಯ ಮೆಲ್ಲಿದ್ದು ನಾನಿಹೆನು.
ಸುರಿಗೆಯ ಮೇಲೊರಗಿ ನಾನಿಹೆನು.
ಚನ್ನಮಲ್ಲಿಕಾರ್ಜುನಯ್ಯ ಕರಕೆಡೆ ನೋಡಿದೊಡೆ,
ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು."

ಇದು ಬರಿಯ ಬಾಯಿ ಮಾತಲ್ಲ. ಆಕೆಯ ಮನೋಧರ್ಮ ಎಂಥಾದ್ದು ಎಂಬುದನ್ನು ಈ ಮುಂದಿನ ಮಾತುಗಳಲ್ಲಿ ಕಾಣಬಹುದು :

"ಕಿಡಿ ಕಿಡಿ ಕೆದರಿದೆಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು.
ಮುಗಿಲು ಹರಿದು ಬಿದ್ದಡೆ, ಎನಗೆ ಮಜ್ಜನಕ್ಕೆರೆದರೆಂಬೆನು.
ಗಿರಿ ಮೇಲೆ ಬಿದ್ದಡೆ, ಎನಗೆ ಪುಷ್ಪವೆಂಬೆನು.
ಚನ್ನಮಲ್ಲಿಕಾರ್ಜುನಯ್ಯ ಶಿರಹರಿದು ಬಿದ್ದಡೆ
ಪ್ರಾಣ ನಿಮಗರ್ಪಿತವೆಂಬೆನು."

ಎಂತಹ ನಿಶ್ಚಲ ಮನೋಧರ್ಮ, ಎಂತಹ ವೀರ ವೈರಾಗ್ಯ ! ಇದು ಅಕ್ಕನಿಗೆ ಮಾತ್ರ ಸಾಧ್ಯ. ಈಗ ಅಕ್ಕನ ಬಾಳುವೆ ಹತ್ತ ರಲ್ಲಿ ಹನ್ನೊಂದಾದ ನೀರು ತಾವರೆಯಂತೆ. ಅವಳಿಗೆ ಪ್ರಪಂಚ ದಲ್ಲಿ ಆಸರೆ ಇಲ್ಲ. ಸಂಸಾರದಲ್ಲಿ ಸುಖವಿಲ್ಲ. ಪ್ರಪಂಚವನ್ನೂ ಸಂಸಾರವನ್ನೂ ತೊರೆದು, ದೇಹಾಭಿಮಾನವನ್ನೂ ಆತ್ಮಾಭಿ ಮಾನವನ್ನೂ ಮರೆತು ಚೆನ್ನಮಲ್ಲಿಕಾರ್ಜುನನನ್ನು ಸಂದರ್ಶಿಸುವ ಏಕಮಾತ್ರ ಧ್ಯೇಯದಿಂದ ಹೊರಬಿದ್ದಳು. ಈ ಸ್ಥಿತಿಯಲ್ಲಿ ಅವಳು ನಶ್ವರವಾದ ಈ ದೇಹವನ್ನು ಎಷ್ಟು ತಾತ್ಸಾರ ಭಾವದಿಂದ ಕಂಡಳೆಂಬುದನ್ನು ಈ ವಚನದಿಂದ ಚೆನ್ನಾಗಿ ಅರಿತುಕೊಳ್ಳ ಬಹುದು.

"ಹಣ್ಣು ಮೆದ್ದ ಬಳಿಕ ಆ ಮರವನಾರು ತರಿದರೇನು ?
ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು ?
ಮಣ್ಣು ಬಿಟ್ಟ ಬಳಿಕ ಆ ಕೆಯ್ಯನಾರುತ್ತರೇನು ?
ಚನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ
ನಾಯಿ ತಿಂದರೇನು ನೀರಕುಡಿದರೇನು ?"

ಇಲ್ಲಿಗೆ ಮಹದೇವಿಯಕ್ಕನ ಜೀವನದಲ್ಲಿ ಎರಡನೆಯ ಘಟ್ಟ ಮುಗಿದಂತಾಯಿತು. "ಯೌವನ ಮದೋನ್ಮತ್ತ ವಿಲಾಸ ವಿಭ್ರಮ ಕಳಾ ಪರಿಪೂರ್ಣ ಶರೀರೆ" ಯಾಗಿದ್ದ ಮಹದೇವಿ ಕೌಶಿಕನ ವಿಷಯೋಪಭೋಗದ ಸುವರ್ಣ ಪಂಜರದಲ್ಲಿ ಪಂಚ ವರ್ಣದ ಗಿಳಿಯಂತೆ ಬಂಧಿತಳಾಗಿದ್ದಳು. ಇನ್ನು ಯಾವ ಹೆಣ್ಣಿ ಗಾದರೂ ಆ ಬಂಧನ ಹಿತವಾಗುತ್ತಿತ್ತು. ಅದನ್ನೆ ಸುಖ ಎಂದ ರಿತುಕೊಂಡು ಅಲ್ಲಿರುತ್ತಿದ್ದಳು. ಆದರೆ ಅಕ್ಕನು ಆ ಕ್ಷಣ ಮಾತ್ರದ ಸುಖಕ್ಕೆ, ಶಾಶ್ವತವಾದ ದಾಸ್ಯಕ್ಕೆ ಮರುಳಾಗಲಿಲ್ಲ. ಏಕೆಂದರೆ ಈಕೆ ಧೀರೆ, ವೀರೆ, ವಿರಾಗಿಣಿ. ರಾಗ ಭೋಗ ಮಿಕ್ಕ

ಹೆಣ್ಣಿನಂತೆ ಅಕ್ಕನಲ್ಲಿಯೂ ಇದ್ದುವು. ಅದಿಲ್ಲದವಳು ಹೆಣ್ಣಲ್ಲ. ಆದರೆ ಮಿಕ್ಕ ಹೆಣ್ಣುಗಳಲ್ಲಿಲ್ಲದ ತ್ಯಾಗ ಯೋಗಗಳು ಇವಳಲ್ಲಿದ್ದುದು ಒಂದು ವಿಶೇಷ. ಈ ಕಾರಣದಿಂದ ಅಕ್ಕ ತನ್ನ ಸಾಧನೆ, ಆತ್ಮಾನುಸಂಧಾನಗಳಿಂದ ರಾಗಭೋಗಗಳನ್ನು ಗೆದ್ದು ಯೋಗ ತ್ಯಾಗಗಳನ್ನು ಹಿಡಿದಳು.

ಜೀವನದಲ್ಲಿ ಒಂದು ಜಿಹಾಸೆ, ಸಂಸಾರದಲ್ಲಿ ಒಂದು ನಿರಾಸೆ ಬರಬೇಕಾದರೆ ಮನುಷ್ಯನಿಗೆ ತಾತ್ಕಾಲಿಕವಾದ ಹೃದಯ ಸ್ಫೂರ್ತಿಯಿಂದ ಬರುವುದಿಲ್ಲ. ನಿರಂತರವೂ ಸಂಸಾರದಲ್ಲಿ ತೊಳಲಿ ಬಳಲಿ, ಅದರ ಕಷ್ಟಸಷ್ಟಗಳಲ್ಲಿ ಬೇನೆಬೇಸರಗಳಲ್ಲಿ ಸುರುಗಿ ಹಣ್ಣಾದ ಆತ್ಮರುಗಳಿಗೆ ಈ ವಿಧವಾದ ವೀರ ವೈರಾಗ್ಯ. ಸಾಧ್ಯ. ಇದು ಅಭಾವ ವೈರಾಗ್ಯವಲ್ಲ, ಸ್ವಭಾವ ವೈರಾಗ್ಯ. ಇದರ ಅರ್ಥ; ಈ ಸಂಸಾರ ನಶ್ವರ, ಈ ದೇಹ ನಶ್ವರ, ಇದಕ್ಕೂ ಹಿರಿದೂ ಮಿಗಿಲು ಆದ ಶಾಶ್ವತವಾದ ಸುಖ ಒಂದಿದೆ, ಆನಂದ ಒಂದಿದೆ, ಶಾಂತಿ ಒಂದಿದೆ ಎಂಬುದರ ಅರಿವಾಗಿ ಆತ್ಮ ಅದನ್ನು ಸಾಧಿಸುವುದರಲ್ಲಿ ಆಸಕ್ತವಾದರೆ ಆಗ ಇಂತಹ ವೈರಾಗ್ಯ ಬರುತ್ತದೆ ಎಂದು. ಅಕ್ಕನ ವೈರಾಗ್ಯ ಈ ರೀತಿಯದು. ಈ ವೈರಾಗ್ಯ ಇಷ್ಟು ತೀವ್ರವೂ ವೀರವೂ ಆದುದಕ್ಕೆ ಆಗ ತನಗೆ ಒಲ್ಲದ ಸಂಸಾರದಲ್ಲಿ ನರಳಿದುದು ಕಾರಣ. ತನಗೊಗ್ಗದ ಭವಿಯೊಬ್ಬನ ಸಹವಾಸವೂ ಕಾರಣ.

ಇಲ್ಲಿ ಒಂದು ವಿಚಾರ ಹಲವರ ಮನಸ್ಸನ್ನು ತೆರೆದಿದೆ. ಅಕ್ಕನು ನಿಜವಾಗಿಯೂ ಮದುವೆಯಾಗಿದ್ದವಳೇ ಎಂಬುದೇ ಅದು. ಅಕ್ಕನ ಪುರಾಣಗಳನ್ನು ಬರೆದ ಕವಿಗಳಲ್ಲಿ ಕೆಲವರು ಆಕೆಗೆ ಮದುವೆಯಾಗಿತ್ತು ಎಂದೂ ಕೆಲವರು ಆಗಿರಲಿಲ್ಲವೆಂದೂ ಹೇಳುತ್ತಾರೆ. ಅಕ್ಕನ ಜೀವನ ಚರಿತ್ರೆಯನ್ನು ತಿಳಿಸುವ ಆಕರ ಗ್ರಂಥ

ಗಳಲ್ಲಿ ಒಂದಾದ ಶೂನ್ಯ ಸಂಪಾದನೆಯಲ್ಲಿ ಐದು ವಿವಿಧ ಪರಿಷ್ಕರಣಗಳಿವೆಯೆಂದೂ ಅವುಗಳಲ್ಲೆಲ್ಲಾ ಅಕ್ಕನ ಚರಿತ್ರೆಯನ್ನು ಕುರಿತ ಭಾಗ ಹೆಚ್ಚು ವಿಸ್ತಾರವಾಗಿ ನಿರೂಪಿತವಾಗಿರುವುದು ಹಲಗೆಯ ದೇವರ "ಶೂನ್ಯ ಸಂಪಾದನೆ"ಯ ಪರಿಷ್ಕರಣದಲ್ಲಿಯೇ ಎಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮೇಲೆ ಕಾಣಿಸಿದ ಅಕ್ಕನಿಗೆ ಮದುವೆಯಾಗಿತ್ತೆ ಇಲ್ಲವೇ ಎಂಬ ಅತಿ ಜಟಿಲವಾದ ಪ್ರಶ್ನೆಗೆ ಹಲಗೆಯ ದೇವರ ಪ್ರತಿಯಲ್ಲಿ ಉತ್ತರ ಹೆಚ್ಚು ಸ್ಪಷ್ಟವಾಗಿ ದೊರೆಯುವಂತಿದೆ, ಶೂನ್ಯಸಂಪಾದನೆಯ ಮಿಕ್ಕ ಪರಿಷ್ಕರಣಗಳಲ್ಲಿ "ಭವಿಯ ಸಂಗವುಂ ತೊರೆದು" "ಅಂಗ ಸಂಗಮಂ ತೊರೆದು" "ಲಿಂಗಧಾರಣವಾಗಲೊಲ್ಲೆನೆಂದ ಭವಿಯ ಸೋಂಕದೆ ಅಂಗಸಂಗವುಂ ತೊರೆದು" ಎಂದಿಷ್ಟೆ ಹೇಳಿ, ಆ ಭವಿಯ ಹೆಸರನ್ನು ಕೂಡ ಎತ್ತದೆ ಸೂಚಿಸಿ "ಮದುವೆಯ ವಿಚಾರವನ್ನು ತೇಲಿಸಿಯೋ ನಿಷೇಧಿಸಿಯೋ ಮುಗಿಸಿಬಿಟ್ಟಿದ್ದಾರೆ." ಹಲಗೆಯ ದೇವರ ಪರಿಷ್ಕರಣದಲ್ಲಾದರೆ ಈ ವಿಷಯ ಹೆಚ್ಚು ಸ್ಪಷ್ಟವಾಗಿ ನಿರೂಪಿತವಾಗಿದೆ. ಅಕ್ಕ "ದೇವಿಯರಿತ್ತ ಅವಧಿ ಬರೆ ಕೌಶಿಕನೆಂಬ ರಾಯಂಗೆ ವಧುವಾಗಿ ನೀರು ತಾವರೆಯಂತೆ ಕಣ್ಣು ಕಾಡಿಗೆಯಂತೆ ನೆಯಿನಾಲಗೆಯಂತೆ ಗಾಳಿಧೂಳಿನಂತೆ ಆ ಸಂಸಾರದೊಳಗಿದ್ದೂ ಇಲ್ಲದೆ ತನುವನೇ ಸಂಸಾರಕ್ಕೆ ಎರವಾಗಿ ಕೊಟ್ಟು ಮನಮೆಚ್ಚಿ ಲಿಂಗದಲ್ಲಿದ್ದು ಗುರುಚರಲಿಂಗದಲ್ಲಿ ಪರಮದಾಸೋಹದಲ್ಲಿ ಭಕ್ತಿಯ ಮಾಡುವಲ್ಲಿ ಆತ ಕೊಟ್ಟ ಭಾಷೆಗೆ ಉತ್ತರವುಂ ಮಾಡಿ ಹೋಗುತ್ತಿರೆ ಸೀರೆಯುಂ ಪಿಡಿದೆಳೆಯೆ ಬಿಟ್ಟು ದಿಗಂಬರಿಯಾಗಿ ದಿಗಂಬರನ ನೆನವುತ್ತ" ಹೊರಹೊರಟಳೆಂದು ಹೇಳಿದೆ. ಹರಿಹರನ ರಗಳೆಯಲ್ಲಿಯೂ ಈ ವೃತ್ತಾಂತ

ಹೀಗೆಯೇ ಬಂದಿದೆ. ಇದರ ಮೇಲೆ ಅಕ್ಕ ಕೌಶಿಕನ ಅರಮನೆಯಲ್ಲಿ ಲಿಂಗಪೂಜಾನಿರತಳಾಗಿದ್ದಾಗ ಭಕ್ತಿಪೂರಿತ ಸ್ತೋತ್ರ ಪದಗಳನ್ನು ಹಾಡುತ್ತಲಿದ್ದಳೆಂದು ಹರಿಹರನು ಹೇಳಿದ್ದಾನೆ.

"ಗೀತದೊಳಗೆ ನೂತ್ನಭಕ್ತಿ ಜಾತವಾಗಲೋತು ಪಾಡಿ
ಗೀತದೊಳಗೆ ಶರ್ವನರಿವು ತೆರಹುಗುಡದೆ ತೀವಿ ಪಾಡಿ."

ಈಶ್ವರನಲ್ಲಿ ತನ್ನ ಪ್ರಾರ್ಥನೆಯನ್ನು ನಿವೇದನೆ ಮಾಡಿಕೊಂಡಳೆಂದು ಹರಿಹರನು ಹೇಳಿದ್ದಾನೆ. ಇಲ್ಲಿ ಅವಳು ಪ್ರಾರ್ಥಿಸಿದ್ದು "ಭವಿಯ ಸಂಗವಣ್ಬುದೆಂದು" ಎಂಬುದಾಗಿ ಹರಿಹರನೇ ಹೇಳಿದ್ದಾನೆ. ಅಕ್ಕ ಅಂದಂದಿನ ಅನುಭವವನ್ನು ಗೀತರೂಪದಲ್ಲಿ ಹಾಡುತ್ತಿದ್ದಳೆಂದು ಹೇಳಿ ಗೀತದ ಸಂದರ್ಭ, ವಿಷಯಗಳನ್ನೂ ಅವಳ ವಚನದಿಂದಲೇ ಹರಿಹರನು ಆಯ್ದು ಕೊಟ್ಟುದಕ್ಕೆ ಕೆಲವು ನಿದರ್ಶನಗಳಿವೆ. ಈ ಸಂದರ್ಭದಲ್ಲಿ ಭವಿಯ ಸಂಗವನ್ನು ನೀಗಿಸು ಎನ್ನುವುದಕ್ಕೆ ಅಕ್ಕನ ಒಂದು ವಚನ ಇದ್ದಿರಬೇಕು. ಆ ವಚನ ಸಿಕ್ಕಿದಂದು ಅಕ್ಕನ ಮದುವೆಯ ಪ್ರಶ್ನೆ ಇತ್ಯರ್ಥವಾಗುತ್ತದೆ. ಅಕ್ಕನು ಬರೆದ ವಚನಗಳು ಸಮಗ್ರವಾಗಿ ಸಂಕಲಿತವಾದ ಬಿಡಿಹೊತ್ತಗೆಯೊಂದು ಈ ವರೆಗೆ ಎಲ್ಲಿಯೂ ದೊರೆತಿಲ್ಲವಾದುದರಿಂದ ಈಗ ಸಿಕ್ಕಿದಷ್ಟೆ ವಚನಗಳಿಂದ ಏನನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲವಾಗಿದೆ. ಆದರೂ ಈಗ ದೊರೆಯುವಷ್ಟೇ ವಚನಗಳನ್ನು ನೋಡಿದರೆ ಕೌಶಿಕ ಎಂಬನಲ್ಲನ ಹೆಸರನ್ನು ಆಗ ಹೇಳದಿದ್ದರೂ ಸಾವಕೆಡುವ ಯಾವುದೋ ಒಂದು ಈ ಪ್ರಪಂಚದ ಪುತ್ತಳಿಯೊಡನೆ ಕೂಡುವ ದುರ್ವಿಧಿ ಆಕೆಗೆ ಒದಗಿರಬೇಕು ಎನಿಸುತ್ತದೆ. ಆ ಪುತ್ತಳಿಯೊಡನೆ ಕೆಲಕಾಲ ಬಾಳಿ, ಆ ಕಷ್ಟದ ಮೂಸೆಯಲ್ಲಿ ಇವಳ ಆತ್ಮ

ಕುದಿದು ಕರಗಿ ಕಾಳಿಕೆ ಕಳೆದು ಚಿನ್ನವಾಯಿತು. ಆ ಚಿನ್ನ ಮುಂದೆ ಚನ್ನಮಲ್ಲಿಕಾರ್ಜುನನ ಕೊರಳ ಕಂಠಿಕೆಯಾಯಿತು. ಹೀಗೆಂದು ಆಕೆಯ ವಚನವನ್ನೋದಿದ ಯಾರಿಗಾದರೂ ಎನಿಸುತ್ತದೆ.

"ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನವ ಕೊಳ್ಳಿರವ್ವಾ !
ನಮ್ಮನಲ್ಲನ ಮೆಯ್ಯ ಪುತ್ತಾವ ಅರಿಸಿನವ ಕೊಳ್ಳಿರವ್ವಾ !
ಒಳಗುಂದದರಿಸಿನವ ಮಿಂದು ಚನ್ನಮಲ್ಲಿಕಾರ್ಜುನನಪ್ಪಿರವ್ವಾ !"

೩

ಇಲ್ಲಿಂದ ಮುಂದೆ ಆಕೆಯ ಜೀವನದಲ್ಲಿ ಮೂರನೆಯ ಘಟ್ಟ ಪ್ರಾರಂಭವಾಗುತ್ತದೆ. ಈ ಘಟ್ಟದಲ್ಲಿ ತನ್ನ ನಲ್ಲನಿಗಾಗಿ ಪಡುವ ವಿಪ್ರಲಂಭವೂ ಅವನ ದರ್ಶನಕ್ಕಾಗಿ ಅನುಭವಿಸುವ ಕಾತರ ಶೃಂಗಾರ ಚೇಷ್ಟೆಗಳೂ ವರ್ಣಿತವಾಗಿವೆ. ಇವುಗಳ ಪೂರ್ಣ ಸ್ವರೂಪವನ್ನು ಇಲ್ಲಿ ಸ್ವಲ್ಪ ವಿವರವಾಗಿ ನೋಡಬಹುದು.

ಅಕ್ಕನು ನಿಜವಾಗಿಯೂ "ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು ? ಗಂಡು ರೂಪು." ಆದುದರಿಂದಲೇ ಯಾರ ಸಹಾಯವೂ ಇಲ್ಲದೆ 'ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತಳು ಶಿವನೊಡನೆ.' ಇದು ನಿಜವಾಗಿಯೂ ಆಕೆಯ ಆಧ್ಯಾತ್ಮಿಕ ಜೀವನದ ಒಂದು ಅತ್ಯದ್ಭುತ ಸಾಹಸ. ಈ ಸಾಹಸದ ಮುಂದಣ ಕಥೆ ಬಹುಶಃ ಹೀಗೆ ನಡೆದಿರಬೇಕು. 'ಹರನೇ ನೀನೆನಗೆ ಗಂಡನಾಗಬೇಕೆಂದು' ಅನಂತಕಾಲ ಅಕ್ಕನು ತಪಸ್ಸುಮಾಡಿದಳು. ಆ ತಪಸ್ಸಿನ ಪೂರ್ವಾರ್ಧ ಅವಳು ತನ್ನ ದೇಹಾಭಿಮಾನ, ಜೀವಾಭಿಮಾನ, ಅಹಂಕಾರ ಮಮಕಾರಗಳನ್ನು ನಾಶಗೊಳಿಸುವುದರಲ್ಲಿ ಕಳೆಯಿತು. ಇದರ ವಿವರ

ಹಿಂದೆ ಸಾಕಷ್ಟು ಬಂದಿದೆ. ಮುಂದೆ ಅಕ್ಕ ತನ್ನ ಚನ್ನನನ್ನು ಒಲಿಸಿಕೊಳ್ಳಲು ಪಟ್ಟ ಪಾಡು ನೋಡತಕ್ಕದ್ದು.

"ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ ?
ನೀನು ಬಹಿರಂಗ ವ್ಯವಹಾರ ದೂರಸ್ಥನು ಅಯ್ಯ,
ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ ?
ನೀನು ವಾಙ್ಮನಾತೀತನು ಅಯ್ಯ,
ಜಪಸ್ತೋತ್ರದಿಂದೊಲಿಸುವೆನೆ ಅಯ್ಯ ? ನೀನು ನಾದಾತೀತನು.
ಭಾವಜ್ಞಾನದಿಂದೊಲಿಸುವೆನೆ ಅಯ್ಯಾ ? ನೀನು ಮತಿಗತೀತನು.
ಹೃದಯಕಮಲದಲ್ಲಿಂಬಿಟ್ಟುಕೊಂಬೆನೆ, ಅಯ್ಯಾ ?
ನೀನು ಸರ್ವಾಂಗ ಪರಿಪೂರ್ಣನು. ಅಯ್ಯಾ ನಿನ್ನ ಒಲಿಸಲೆನ್ನಳವಲ್ಲ.
ನೀನೊಲಿವುದೇ ಸುಖವಯ್ಯ ಚನ್ನಮಲ್ಲಿಕಾರ್ಜುನಾ."

ಆದುದರಿಂದಲೇ ಅಕ್ಕನು ತನ್ನ ಅಸಹಾಯತೆಯನ್ನು ಒಪ್ಪಿಕೊಂಡು 'ನಿನ್ನ ಒಲಿಸಳವಲ್ಲ, ನೀನೊಲಿವುದೇ ಸುಖವಯ್ಯ !' ಎಂದು ಬೇಡಿಕೊಳ್ಳುತ್ತಾಳೆ; ಅಷ್ಟೇ ಅಲ್ಲ.

"ಭಕ್ತೆಯಾನಪ್ಪೆನೆ ಅಯ್ಯ ? ಕರ್ತೃಭೃತ್ಯತ್ವವ ನಾನರಿಯೆ.
ಮಾಹೇಶ್ವರಿಯಾನಪ್ಪೆನೆ ಅಯ್ಯ ? ವ್ರತನೇಮವ ನಾನರಿಯೆ.
ಪ್ರಸಾದಿಯಾನಪ್ಪೆನೆ ಅಯ್ಯ ? ಅರ್ಪಿತ ಅನರ್ಪಿತವೆಂಬ ಭೇದವ ನಾನರಿಯೆ
ಪ್ರಾಣಲಿಂಗಿಯಾನಪ್ಪೆನೆ ಅಯ್ಯ ? ಅನುಭಾವ ಗಮನವ ನಾನರಿಯೆ.
ಶರಣೆಯಾನಪ್ಪೆನೆ ಅಯ್ಯ ? ಶರಣಸತಿ ಲಿಂಗಪತಿ ಎಂಬ ಭಾವವ ನಾನರಿಯೆ.
ಐಕ್ಯಳಾನಪ್ಪೆನೆ ಅಯ್ಯ ? ಬೆರಸಿ ಭೇದವ ನಾನರಿಯೆ.
ಚನ್ನಮಲ್ಲಿಕಾರ್ಜುನಯ್ಯ ಷಟ್ಸ್ಥಲದಲ್ಲಿ ನಿಃಸ್ಥಲವಾಗಿಪ್ಪೆನು."

ಎಂದು ಅಕ್ಕನು ಭಕ್ತಿಮಾರ್ಗದ ಕಷ್ಟಗಳನ್ನು ವರ್ಣಿಸಿದ್ದಾಳೆ. ಅವಳಿಗೆ ಇರುವುದೆಂದರೆ ಒಂದೇ ಶಕ್ತಿ. ಅನನ್ಯಮನಸ್ಕಳಾಗಿ ಜಗದೀಶ್ವರನನ್ನು ಬೇಡಿಕೊಳ್ಳುವುದು. 'ನೀನೊಲಿದು ಕೊಂಡಾಡಿ

ದರೆ, ಇರುಹೆ ರುದ್ರನಾಗದೆ ಹೇಳಯ್ಯ ?' ಎಷ್ಟು ಒಲಿದು ಕೊಂಡಾಡಿದರೂ ಭಗವಂತನು ಭಕ್ತಪರಾಧೀನನಾಗುವುದು ಸ್ವಲ್ಪ ವಿಳಂಬವೇ ಆಗುವುದು. ಇದು ಸಹಜ. ಆದರೆ ಈ ವಿಳಂಬದ ಕಾಲವನ್ನು ಭಕ್ತರು ಸಹಿಸುವುದೆಂತು ? ಅದು ಅವರಿಗೆ ಕಿಚ್ಚಿಲ್ಲದ ಬೇಗೆ. ಏರಿಲ್ಲದ ಗಾಯ. ಸುಖವಿಲ್ಲದ ಧಾವತಿ. ಇದರ ಪರಿಣಾಮವಾಗಿ ಅಕ್ಕನ ಮನ ತಳವೆಳಗಾಯಿತು. ಸುಳಿದು ಬೀಸುವ ಗಾಳಿ ಉರಿಯಾಯಿತು. ಬೆಳದಿಂಗಳು ಬಿಸಿಲಾಯಿತು. ಅಕ್ಕನ ಮಾತಿನಲ್ಲಿಯೇ ನಾವು ಅವಳ ಈ ಮಧುರ ಭಾವದ ರಸದ ಒರತೆಗಳನ್ನು ಸವಿಯಬೇಕು.

"ಎನ್ನ ಮನವ ಮಾರುಗೊಂಡನವ್ವಾ !
ಎನ್ನ ತನುವ ಸೂರೆಗೊಂಡನವ್ವಾ !
ಎನ್ನ ಸುಖವನೊಪ್ಪುಗೊಂಡನವ್ವಾ !
ಎನ್ನಿರವನಿಂಬುಗೊಂಡನವ್ವಾ !
ಚನ್ನಮಲ್ಲಿಕಾರ್ಜುನನ ಒಲುಮೆಯುವಳಾನು"

ಇಂತಹ ಒಲುಮೆವೆಣ್ಣು

"ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು
ದೇವಾಂಗವನ್ನುಟ್ಟು, ಪುರುಷ ಬಾರಾ !
ನಿನ್ನ ಬರವೆನ್ನಸುವಿನ ಬರವು ಬಾರಯ್ಯ !
ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು
ಬಟ್ಟೆಗಳ ನೋಡಿ ಬಾಯಾರುತ್ತಿಹೆನು."

ಎಂದು ಅಕ್ಕರೆಯಿಂದ ಕರೆದು ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ದಾರಿಗಳನ್ನು ನೋಡಿ ಬಾಯಾರುತ್ತಿರುವುದು ಸಹಜ ತಾನೆ ! ಜೀವನದ ಒಂದೆರಡು ಅಮಾನುಷ ಮುಹೂರ್ತ ಗಳಲ್ಲಿ ಮಾತ್ರ ಹೀಗೆ ಅಕ್ಕ ಚನ್ನಮಲ್ಲಿಕಾರ್ಜುನನ ಹಂಬಲಿ ನಿಂದ ಬಾಯಾರಿದಳೆಂದಲ್ಲ. ಅವಳ ಈ ಶಿವಸಾಪೇಕ್ಷತ್ವದ ತೃಷೆ

ಇಡೀ ಜೀವನವನ್ನೇ ರಸಮಯವನ್ನಾಗಿ ಮಾಡಿತ್ತು. ಹಗಲೂ ಇರುಳೂ ಅವಳಿಗೆ ಇದೇ ಧ್ಯಾನ.

"ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆ, ನೋಡಯ್ಯ.
ಇರುಳು ನಾಲ್ಕು ಜಾವ ನಿಮ್ಮ ವಿಕಳಾವಸ್ಥೆಯಲ್ಲಿರ್ಪೆ, ನೋಡಯ್ಯ.
ಇರುಳು ಹಗಲು ನಿಮ್ಮ ಕಳವಳದಲ್ಲಿ ಮರೆದೊರಗಿದೆನಯ್ಯಾ.
ಚನ್ನಮಲ್ಲಿಕಾರ್ಜುನಾ, ನಿಮ್ಮೊಲುಮೆ ನಟ್ಟು ಹಸಿವು ತೃಷೆ ನಿದ್ರೆಯ ಮರೆತೆನು."

"ಬಂದಹನೆಂದು ಬಟ್ಟೆಯ ನೋಡಿ
ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ !
ತಡವಾದೊಡೆ ಬಡವಾದೆ, ತಾಯೆ."

ಹೀಗೆ ಅಕ್ಕ, ಲಿಂಗದ ವಿಕಳಾವಸ್ಥೆಯಲ್ಲಿ ಕಡುಬಡವಾದಳು. ಬಡವಾಗುವುದು ಅವರ ಹಣೆಬರಹ. ಅಂದಮಾತ್ರಕ್ಕೆ ತನ್ನ ಇಷ್ಟ ದೈವವು ಕಣ್ ತೆರೆಯಿತೆಂದು ಹೇಳಬಹುದೇ ? ಅಕ್ಕನಿಗೆ ಗೊತ್ತು—

"ಅರಸಿ ತೊಳಲಿದರಿಲ್ಲ ಬಯಸಿ ಹೊಕ್ಕರಿಲ್ಲ
ತಪಸ್ಸುಮಾಡಿದರಿಲ್ಲ ಅದು ತನ್ನ ಬಹ ಕಾಲಕ್ಕಲ್ಲದೆ
ಸಾಧ್ಯವಾಗದು ಶಿವನೊಲಿದಲ್ಲದೆ ಕೈಗೂಡದು."

ಕೈಗೂಡುವವರೆಗೆ ತ್ರಿಕರಣ ಪೂರ್ವಕವಾಗಿ ತನ್ನ ಸರ್ವಸ್ವವನ್ನೂ ಪರಮಾತ್ಮನಲ್ಲಿ ನಿವೇದಿಸಿ ಆತನನ್ನೇ ನೆನೆಯಬೇಕು. ಅಕ್ಕ ಇಂತಹ ಸಾಧನೆ ಮಾಡುತ್ತಿದ್ದಳು. ಪರವಸ್ತುವಿನ ಕಡೆಗೆ ಮಧುರ ಭಾವದಿಂದ ಆರ್ದ್ರಹೃದಯಳಾಗಿ ನೋಡುತ್ತಿದ್ದಳು. ಆತನೇ ತನ್ನ ಜೀವ ಸರ್ವಸ್ವ, ಆತನೇ ಮುಕ್ತಿ ಬಂಧು ಎಂದು ಅವಿರಳಮನಸ್ಕಳಾಗಿ ಬೇಡುತ್ತಿದ್ದಳು, ಅಂಗಲಾಚುತ್ತಿದ್ದಳು.

"ನಚ್ಚುಗೆ ಮನ ನಿಮ್ಮಲ್ಲಿ ಮಚ್ಚುಗೆ ಮನ ನಿಮ್ಮಲ್ಲಿ
ಸಲುಗುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ
ಅಳಲುಗೆ ಮನ ನಿಮ್ಮಲ್ಲಿ ಬಳಲುಗೆ ಮನ ನಿಮ್ಮಲ್ಲಿ
ಕರಗುಗೆ ಮನ ನಿಮ್ಮಲ್ಲಿ ಕೊರಗುಗೆ ಮನ ನಿಮ್ಮಲ್ಲಿ
ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯ.

ಹೀಗೆ ಏಕನಿಷ್ಠೆಯಿಂದ ಪರಮಾತ್ಮನನ್ನು ಧ್ಯಾನಿಸುವುದೇ ಒಂದು ಸಾಧನೆ. ತನ್ನ ಪಂಚೇಂದ್ರಿಯಗಳೂ ಆತನ ಚಿರಂತನ ಧ್ಯಾನದಲ್ಲಿ ಲೀನವಾಗುವುದೇ ಒಂದು ಯೋಗ. ಇದಕ್ಕೆ ಮುಖ್ಯವಾಗಿ ಮನಸ್ಸು ನೂರಾರು ಕಡೆ ಹರಿದುಹೋಗದೆ ಒಂದೇ ಕಡೆ ನೆಲಸಬೇಕಾಗುತ್ತದೆ. ಇಂತಹ ಚಿತ್ತದಲ್ಲಿ ಏಕಾಗ್ರತೆಯನ್ನು ಅಕ್ಕ ಸಾಧಿಸಿಕೊಂಡಿದ್ದಳು.

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳುದೊಂದು ಮನ ಆ ಮನ ನಿಮ್ಮಲ್ಲಿ
ಒಡವೆರೆದ ಬಳಿಕ ಎನಗೆ ಭವ ಉಂಟೆ ಚನ್ನಮಲ್ಲಿಕಾರ್ಜುನಾ ?

ಹೀಗೆಂದು ಅಕ್ಕ ಅತ್ತಲಿತ್ತ ಹರಿವ ಮನದ ಶಿಖರವನ್ನು ಕತ್ತರಿಸಿ ಧ್ಯಾನಮಗ್ನಳಾದಳು.

"ಉದಯದಲೆದ್ದು ನಿಮ್ಮ ನೆನೆವೆನಯ್ಯ
ನಿಮ್ಮ ಬರವ ಹಾರುತ್ತಿರ್ಪೆನಯ್ಯ :
ಪಸೆಹಂದರವನಿಕ್ಕಿ ನಿಮ್ಮಡಿಗಳಿಗೆ ಎಡೆ ಮಾಡಿಕೊಂಡಿಪ್ಪೆನಯ್ಯಾ
ಚನ್ನಮಲ್ಲಿಕಾರ್ಜುನಾ, ನೀನಾವಾಗ ಬಂದಿಹೆ ಎಂದು."

ಹಿಂಡನ್ನು ಆಗಲಿ ಹಿಡಿವಡೆದ ಕುಂಜರವು ತನ್ನ ವಿಂಧ್ಯವನ್ನು ನೆನೆಯುವಂತೆ ಬಂಧನಕ್ಕೆ ಬಂದ ಗಿಳಿಯು ತನ್ನ ಬಂಧುವನ್ನು ನೆನೆಯುವಂತೆ ಚನ್ನಮಲ್ಲಿಕಾರ್ಜುನನನ್ನು ಅಕ್ಕ ನೆನೆನೆನೆದು

ಹಂಬಲಿಸುತ್ತಿದ್ದಳು. ಈ ಹಂಬಲದ ಉದ್ದೇಶ, ಆ ದೊರೆ ಈ ರಾಣಿಯನ್ನು "ಕಂದ ನೀನಿತ್ತ ಬಾ" ಎಂದು ಕರೆಯಬೇಕೆಂದು. ಈ ಕರೆ ಆ ದೊರೆಯನ್ನು ಮುಟ್ಟಿತೋ ಇಲ್ಲವೊ! ಇಲ್ಲದಿದ್ದರೆ ಹೀಗೆ ವಿಮುಖನಾಗುವನೇ ? ಅಕ್ಕ ಆದರೂ ಹೆದರಲಿಲ್ಲ.

"ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ।
ಅಯ್ಯ ನೀನೊಲಿದರೆ ಒಲಿ, ಒಲಿಯದಿರ್ದೊಡೆ ಮಾಣು
ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ !
ಅಯ್ಯಾ ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿರ್ದೊಡೆ ಮಾಣು
ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ !
ಅಯ್ಯ ನೀ ನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು
ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ !
ಚನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ
ಹರುಷನೊಲೋಲಾಡುವೆನಯ್ಯ."

ಇದು ಭಾವ ಸಮಾಧಿಯಲ್ಲಿ ನಿಮಗ್ನಳಾದ ಅಕ್ಕನ ಕರ್ತವ್ಯ ನಿಷ್ಠೆಯ ಒಂದು ಮುಖ ಈ ಮುಖಕ್ಕೆ ಚನ್ನಮಲ್ಲಿಕಾರ್ಜುನನ ಸಾಕ್ಷಾತ್ಕಾರ ಒಂದು ಹೊಂಗನಸಿನಂತೆ ಲಭಿಸಿರಬೇಕು. ಇದರ ಚಿತ್ರ ಈ ಮಾತುಗಳಲ್ಲಿ ಕಾಣುತ್ತದೆ.

"ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು
ಫಣಿಮಣಿ ಕರ್ಣಕುಂಡಲದವ ನೋಡವ್ವ।
ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವಾ !
ಗೋವಿಂದನ ನಯನ ಉಂಗುಟದಮೇಲಿಪ್ಪುದು
ಚನ್ನಮಲ್ಲಿಕಾರ್ಜುನದೇವ, ನಿನ್ನ ಕುರುಹವ್ವಾ !"

ಕುರುಹು ಸಿಕ್ಕಿದ ಮೇಲೆ ಕನಸು ಕಾಣುವುದು ಕಷ್ಟವಲ್ಲ. ಎಲ್ಲ ಅನುಭಾವಿಗಳಿಗೆ ಇದರ ಅನುಭವವಿದೆ. ಅವರವರ ಜೀವನ ದಲ್ಲಿ ಅವರವರ ಧ್ಯಾನಮೂರ್ತಿ ಎಂದಿಗಾದರೊಮ್ಮೆ ಕನಸಿನಲ್ಲಿ

ಗೋಚರವಾಗಿ ಅಭಯನೀಡುವುದುಂಟು. ಅಕ್ಕನಿಗೂ ಇಂತಹ ದಿವ್ಯಾನುಭವ ಉಂಟಾಯಿತು.

"ಅಕ್ಕ ಕೇಳವ್ವ, ಅಕ್ಕಯ್ಯ ! ನಾನೊಂದ ಕನಸ ಕಂಡೆ.
ಅಕ್ಕಿಯಡಕೆ ತೆಂಗಿನಕಾಯ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಬಂದುದ ಕಂಡೆನವ್ವ.
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಈಗ ಅಕ್ಕನಿಗೆ ಧೈರ್ಯವಾಯಿತು. ಬರೆದ ಪತ್ರಕ್ಕೆ ರುಜು ಮಾಡಿದಂತೆ ಚನ್ನಮಲ್ಲಿಕಾರ್ಜುನ ಈಕೆಯ ಒಲುಮೆಯ ಪತ್ರಕ್ಕೆ ರುಜುಹಾಕಿ ಹೋದನು. ಅಕ್ಕನ ಬದುಕು ಸಾರ್ಥಕವಾಯಿತು. "ನಾ ನಿನಗೊಲಿದೆ, ನೀನು ಎನಗೊಲಿದೆ, ನೀನೆನ್ನನಗಲದಿಪ್ಪೆ, ನಾನಿನ್ನನಗಲದಿಪ್ಪೆನಯ್ಯ." ಅಕ್ಕನಿಗೆ ಇನ್ನು ಜೀವನದಲ್ಲಿ ಎಲ್ಲಿಲ್ಲದ ಉತ್ಸಾಹ, ಎಲ್ಲೆ ಇಲ್ಲದ ಆನಂದ. ತನ್ನ ಈ ಆನಂದದಲ್ಲಿ ಎಲ್ಲರೂ ಭಾಗಿಗಳಾಗಬೇಕೆಂದು ಅವಳ ಆಸೆ.

"ಇಂದೆನ್ನ ಮನೆಗೆ ಗಂಡ ಬಂದಿಹನೆಲಗವ್ವಾ
ನಿಮನಿಮಗೆಲ್ಲಾ ಶೃಂಗಾರವ ಮಾಡಿಕೊಳ್ಳಿ
ಚನ್ನಮಲ್ಲಿಕಾರ್ಜುನನೀಗಳೆ ಬಂದಿಹನು
ಇದಿರುಗೊಳ್ಳಬನ್ನಿರೆ ಅವ್ವಗಳಿರಾ."

ಎಂದು ಆನಂದದ ಭರದಲ್ಲಿ ಹಿಗ್ಗಿಹೋದಳು. ಇಲ್ಲಿಗೆ ಅವಳ ಚರಿತ್ರೆಯಲ್ಲಿ ಮೂರನೆಯ ಘಟ್ಟ ಮುಗಿಯುತ್ತದೆ.

೪

"ಆಡುವುದು, ಪಾಡುವುದು, ಕೇಳುವುದು, ಹೇಳುವುದು ನಡೆವುದು
ನುಡಿವುದು, ಸರಸಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.
ಚನ್ನಮಲ್ಲಿಕಾರ್ಜುನಯ್ಯ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗ ಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು."

ನಾಲ್ಕನೆಯ ಘಟ್ಟ ಅಕ್ಕ ಕಲ್ಯಾಣಕ್ಕೆ ಹೋಗಿ ಶಿವಶರಣರ ಗೋಷ್ಠಿ ನೆರೆದ ಶಿವಾನುಭವಮಂಟಪದಲ್ಲಿ ತನ್ನ ಅನುಭಾವ ವಿದ್ಯೆಯನ್ನು ಬೀರಿ ಪ್ರತಿಯಾಗಿ ಬಸವ ಪ್ರಭುದೇವಾದಿ ಹಿರಿಯರಿಂದ ಗೂಢ ತತ್ತ್ವೋಪದೇಶಗಳನ್ನು ಪಡೆದಲ್ಲಿಯವರೆಗಿನ ಕಥೆಯಾಗುತ್ತದೆ.

ಅಕ್ಕ ಕಲ್ಯಾಣ ಪಟ್ಟಣಕ್ಕೆ ಹೋಗಿ ಅಲ್ಲಿ ಬಸವ, ಚನ್ನಬಸವ, ಅಲ್ಲಮ, ಸಿದ್ಧರಾಮಾದಿ ಶಿವಶರಣರ ಸಂಗ ಸಹವಾಸದಲ್ಲಿ ಕೆಲ ಕಾಲವಿದ್ದು ಅವರಿಂದ ಅನೇಕ ವಿಷಯಗಳನ್ನು ಅರಿತುಕೊಂಡಳು. ಮುಖ್ಯವಾಗಿ ಬಸವ ಮತ್ತು ಅಲ್ಲಮರಿಂದ ಅವಳು ಮಹತ್ವದ ಸಂಗತಿಗಳನ್ನು ತಿಳಿದುಕೊಂಡಳು. ಬಸವಣ್ಣನನ್ನು ತನ್ನ ಗುರು ಎಂದು ಅಕ್ಕ ಅನೇಕ ಕಡೆ ಸಂಬೋಧಿಸಿದ್ದಾಳೆ. ಆತನನ್ನು ಮುಕ್ತಕಂಠಿಯಾಗಿ ಹೊಗಳಿದ್ದಾಳೆ. "ತ್ರಿವಿಧ ಲಿಂಗಾಗ ಸಂಬಂಧಿ, ಅನ್ಯ ದೈವಸ್ಮರಣೆಯ ಹೊದ್ದ, ಭವಿಸಂಗವ ಮಾಡ, ಭವಿ ಪಾಕವ ಕೊಳ್ಳ, ಪರಸ್ತ್ರೀಯರ ಬೆರಸ, ಪರಧನವನೊಲ್ಲ, ಪರನಿಂದೆಯನಾಡ, ಅನೃತವ ನುಡಿಯ" ಇತ್ಯಾದಿಯಾಗಿ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆಯುವ "ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚನ್ನಮಲ್ಲಿಕಾರ್ಜುನಾ" ಎಂದು ಅಕ್ಕ ಬಸವಣ್ಣನ ಗುಣವನ್ನು ಕೊಂಡಾಡಿ ಆತನ ಪರಮ ಭಕ್ತೆಯಾಗಿ ಅವನಿಂದ ತತ್ತ್ವೋಪದೇಶವನ್ನು ಪಡೆದಳು.

ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು
ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು
ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು
ಅರಿವೇ ಜಂಗಮವೆಂದು ಅರುಹಿದನಯ್ಯ ಬಸವಣ್ಣನು

ಕಾಮನ ಗೆಲಿದೆನು ಬಸವಾ ನಿಮ್ಮ ದಯೆಯಿಂದ
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು ಭಾವಿಸಲು ಗಂಡುರೂಪು
ಬಸವಾ ನಿಮ್ಮ ದಯದಿಂದ ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ
ತೊಡರನಿಕ್ಕಿ ಎರಡು ಅರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದೆ.

ಕಲ್ಯಾಣದಲ್ಲಿ ಇದ್ದಷ್ಟು ದಿವಸವೂ ಅಕ್ಕ ಬಸವಣ್ಣನ ಮಹಾಮನೆಯಲ್ಲಿ ಆತನ ಕರುಣೆಯ ಕಂದನೆಂಬಂತೆ ಬಾಳಿದಳು. ಬಸವಣ್ಣನೂ ಆಕೆಯಲ್ಲಿ ವಿಶೇಷ ಪ್ರೀತ್ಯಾದರಗಳನ್ನೂ ಭಕ್ತಿ ಗೌರವಗಳನ್ನೂ ಪ್ರಕಟಿಸಿ ಶಿವಸಾಪೇಕ್ಷತ್ವಕ್ಕೆ ಅತಿ ಸುಲಭವೂ ಸರಳವೂ ಆದ ಭಕ್ತಿಮಾರ್ಗವನ್ನು ಆಕೆಗೆ ಉಪದೇಶಿಸಿದನು.

ಬಸವಣ್ಣನಿಂದ ಭಕ್ತಿಯ ಸಂಪ್ರದಾಯವನ್ನು ಅರಿತುಕೊಂಡಂತೆ ಅಲ್ಲಮ ಪ್ರಭುವಿನಿಂದ ಅಕ್ಕನು ಜ್ಞಾನಮಾರ್ಗವನ್ನು ಅರಿತುಕೊಂಡಳು. ಕಲ್ಯಾಣ ಪಟ್ಟಣಕ್ಕೆ ಹೋದ ಮೊದಲಿನಲ್ಲಿ ಅಲ್ಲಿ ನೆರೆದ ಶಿವಾನುಭವಮಂಟಪದ ಶರಣ ಸಂದೋಹದಲ್ಲಿ ಅಕ್ಕನಿಗೂ ಅಲ್ಲಮನಿಗೂ ಭಕ್ತಿ, ಜ್ಞಾನ, ವೈರಾಗ್ಯಗಳ ವಿಷಯದಲ್ಲಿ ವಾದ ನಡೆಯಿತು ಎಂದು "ಶೂನ್ಯ ಸಂಪಾದನೆ" ಎನ್ನುವ ಗ್ರಂಥದಲ್ಲಿ ಬರೆದಿದೆ. ಅಕ್ಕ ಅಲ್ಲಮರ ವಾದವನ್ನು ಅವರವರ ವಚನಗಳಿಂದಲೇ ಸಂವಾದ ರೂಪದಲ್ಲಿ ಅಳವಡಿಸಿ ಅಕ್ಕನ ಚರಿತ್ರೆಯನ್ನು ಶೂನ್ಯ ಸಂಪಾದನಕಾರರು ಹೇಳಿರುವುದರಿಂದ ನೀರಸವಾದ ತತ್ವಪ್ರತಿಪಾದನೆಯ ಈ ಭಾಗ ಅಲ್ಲಿ ಹೆಚ್ಚಿನ ಮೆರುಗಿನಿಂದ ಶೋಭಿಸುತ್ತಿದೆ. ಅಲ್ಲಿ ಬರುವ ಅಕ್ಕ ಮತ್ತು ಅಲ್ಲಮರ ಸಂವಾದದ ಕೆಲವೊಂದು ಭಾಗವನ್ನು ಮಾತ್ರ ಇಲ್ಲಿ ಎತ್ತಿಕೊಟ್ಟಿದೆ.

ಅಲ್ಲಮ :–ಸತಿ ನೀನು ಇತ್ತಲೇತಕ್ಕೆ ಬಂದೆಯವ್ವಾ. ಸತಿಯೆಂದರೆ ಮುನಿವರು ಎಮ್ಮ ಶರಣರು. ನಿನ್ನ ಪತಿಯ ಕುರುಹ

ಹೇಳಿದರೆ ಬಂದು ಕುಳ್ಳಿರು, ಇಲ್ಲದಿದ್ದರೆ ತೊಲಗು ತಾಯೆ. ನಮ್ಮ ಗುಹೇಶ್ವರನ ಶರಣರಲ್ಲಿ ಸಂಗ ಸುಖ ಸನ್ನಿಹಿತವ ಬಯುಸುವರೆ ನಿನ್ನ ಪತಿ ಯಾರೆಂಬುದ ಹೇಳೆ ಎಲೆ ಅವ್ವಾ.

ಅಕ್ಕ :- ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತು ಬೆಸಗೊಳಲ್ಪಟ್ಟೆ ದರೆ ಶಶಿಧರನ ಹತ್ತಿರ ಕಳುಹಿದರೆಮ್ಮವರು.

ಗುರುವೇ ತೆತ್ತಿಗನಾದ, ಲಿಂಗವೇ ಮದುವಳಿಗನಾದ. ನಾನೇ ಮದುವಳಿಗೆಯಾದೆನು ............... ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೇ.

ಅಲ್ಲಮ :–ತಪ್ಪಹೊರಿಸಿ ಹೊರಟೆನೆಂಬುದು ಸತ್ಯವೆ ? ತನು ಸಿರಿಯನಳಿದು ನಿರ್ವಾಣವಾದಲ್ಲಿ ಮನದ ಭ್ರಾಂತು ನಿಶ್ಚಯವಾಗದು. ಕೇಶವೆಂಬ ಸೀರೆಯೇ ಅಂಗಕ್ಕೆ ಮರೆಯಾಯಿತ್ತು. ಅಪಮಾನವೆಂತು ಹರಿಯಿತ್ತು ? ಅದು ಗುಹೇಶ್ವರ ಲಿಂಗಕ್ಕೆ ಸಲ್ಲದ ವೇಷ.

ಅಕ್ಕ :–ಕಾಯ ಕರ್ರನೆ ಕಂದಿದರೇನಯ್ಯ. ಕಾಯ ಮಿರ್ರನೆ ಮಿಂಚಿದರೇನಯ್ಯ. ಅಂತರಂಗ ಶುದ್ಧವಾದ ಬಳಿಕ ಚನ್ನಮಲ್ಲಿಕಾರ್ಜುನಲಿಂಗವು ಒಲಿದ ಕಾಯವು ಹೇಗಿದ್ದರೇನಯ್ಯ ?

ಅಲ್ಲಮ :–ದೇವನೊಲಿಯದೆ ನೀನೊಲಿಸಿದೆನೆಂಬುದು ಅದಾವುದಕ್ಕೆ ? ಭಾವ ಶುದ್ಧವಾದಲ್ಲಿ ಸೀರೆಯನುಳಿದು ಕೂಲದ ಮರೆ ಮಾಡುವುದೇತಕ್ಕೆ ? ಅದು ಅಂತರಂಗದ ನಾಚಿಕೆ ; ಬಾಹ್ಯದಲ್ಲಿ ತೋರಿತ್ತು. ಇದು ಗುಹೇಶ್ವರ ಲಿಂಗಕ್ಕೆ ಒಲವರವಲ್ಲ.

ಅಕ್ಕ :–ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ.

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೆ ಲೇಸು ಕಂಡಯ್ಯ. ಕಾಯದ ಸಂಗವ ವಿವರಿಸ ಬಲ್ಲಡೆ ಕಾಯದ ಸಂಗವೆ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ ಕಾಯವಿಕಾರವು. ಚನ್ನಮಲ್ಲಿಕಾರ್ಜುನಯ್ಯಾ, ನೀನೊಲಿದವರು ಕಾಯಗೊಂಡಿದ್ದರೆನಬೇಡ.

ಅಲ್ಲಮ :-ತನುಗುಣ ವಿವರಿಸಿಹೆನೆಂದರೆ ಮನ ಶುದ್ಧವಾಗ ಬೇಕು. ಮನಗುಣ ವಿವರಿಸಿಹೆನೆಂದರೆ ಇಂದ್ರಿಯ ಶುದ್ಧವಾಗ ಬೇಕು. ತನು ಮನ ಇಂದ್ರಿಯಂಗಳು ಶುದ್ಧಸುಯಿಧಾನವಾಗಿ ಲಿಂಗಮುಖಕ್ಕೆ ವೇದ್ಯವಾದಲ್ಲದೆ ಗುಹೇಶ್ವರ ಲಿಂಗವ ಬೆಸಗೊಳ ಬಾರದು ಕೇಳಾ, ತಾಯೆ.

ಅಕ್ಕ :-ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದಕೊಂಡು. ಎನ್ನ ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದು. ಎನ್ನ ಕಂಗಳು ಶುದ್ಧವಾಯಿತ್ತು ಸಕಲ ಪುರಾತನರ ನೋಡಿ ಎನ್ನ ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ. ಎನ ಭಾವನೆಯನಗಿದು ಜೀವನವು ಕೇಳಾ, ಲಿಂಗತಂದೆ, ನೆಟ್ಟನೆ ನಿಮ್ಮುವ ಪೂಜಿಸಿ ಭವಗಟ್ಟೆ ಕಾಣಾ, ಚನ್ನಮಲ್ಲಿಕಾರ್ಜುನಾ.

ಅಲ್ಲಮ :-ಕಾಯ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಜೀವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಭಾವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಗುಹೇಶ್ವರ ಲಿಂಗದಲ್ಲಿ ಶುದ್ಧಸುಯಿಧಾನಿಯಾದೆನೆಂದರೆ ನಿಜವು ಸಾಧ್ಯವಾಗದು ಕೇಳಾ ಅವ್ವಾ.

ಅಕ್ಕ :-ಕಾಯದೊಳಗೆ ಅಕಾಯವಾಯಿತ್ತು. ಜೀವದೊಳಗೆ ನಿರ್ಜೀವವಾಯಿತ್ತು. ಭಾವದೊಳಗೆ ನಿರ್ಭಾವವಾಯಿತ್ತು. ಎನ್ನ ಮನದೊಳಗೆ ಘನನೆನಹಾಯಿತ್ತು. ಎನ್ನ ತಲೆವೊಲೆಗೆಳ ನೋಡಿ ಸಲಹಿದಿರಾಗಿ ಚನ್ನಮಲ್ಲಿಕಾರ್ಜುನನ ಧರ್ಮದವಳು.

ಅಲ್ಲಮ :–ಕೂಡಲಿಲ್ಲದ ಘನವ ಕೂಡುವ ಪರಿ ಎಂತವ್ವ ? ಹೇಳಿದರೆ ಅದಕ್ಕದೆ ಕೊರತೆ. ಗುಹೇಶ್ವರ ಲಿಂಗವ ಬೇರೆ ಮಾಡಿ ಬೆರಸುವ ಪರಿ ಎಂತು ಹೇಳಾ ?

ಅಕ್ಕ :–ಗಟ್ಟಿದುಪ್ಪಕ್ಕೆ ತಿಳಿದುಪ್ಪಕ್ಕೆ ಭೇದ ಉಂಟೆ ಅಯ್ಯ ? ದೀಪಕ್ಕೆ ದೀಪ್ತಿಗೆ ಭೇದ ಉಂಟೆ ಅಯ್ಯ ? ಆತ್ಮಕ್ಕೆ ಅಂಗಕ್ಕೆ ಭೇದ ಉಂಟೆ ಅಯ್ಯ ? ಎನ್ನ ಅಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ ಸಾವಯಕ್ಕೆ ನಿರವಯಕ್ಕೆ ಭೇದವಿಲ್ಲ ವಯ್ಯ. ಚನ್ನಮಲ್ಲಿಕಾರ್ಜುನನೇ ವರಿಸಿ ಬೆರಸಿ ಮತಿಗೆಟ್ಟವಳ ನೇತಕ್ಕೆ ನುಡಿಸುವಿರಯ್ಯ ಪ್ರಭುವೇ ?

ಅಂಗವ ಲಿಂಗಮುಖದಿಂದರ್ಪಿಸಿ ಅಂಗ ಅನಂಗವಾಯಿತ್ತು. ಮನವ ಅರಿವಿಂಗರ್ಪಿಸಿ ಮನಲೀಯ್ಯವಾಯಿತ್ತು. ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು. ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯುವಾಯಿತ್ತು. ಎನ್ನ ಕಾಯುದ ಸುಖದ ಭೋಗವ ಲಿಂಗವೇ ಭೋಗಿಸುವುದಾಗಿ ಶರಣ ಸತಿ ಲಿಂಗ ಪತಿಯಾದೆನು. ಇದು ಕಾರಣ ಚನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು.

ಅಲ್ಲಮ :–ಸಾ ಸತ್ತೆನೆಂದು ಹೆಣ ಕೂಗಿದುದುಂಟೆ ? ಬಯ್ಚಿಟ್ಟ ಬಯಕೆ ಕರೆದುದುಂಟೆ ? ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ ? ಈ ಮಾತು ಒಪ್ಪುವಪ್ಪುದೇ, ಗುಹೇಶ್ವರಲಿಂಗಕ್ಕೆ ?

ಅಕ್ಕ :–ಸತ್ತ ಹೆಣ ಕೂಗಿದುದುಂಟು. ಬಯ್ಚಿಟ್ಟ ಬಯಕೆ ಕರೆದುದುಂಟು. ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದು ದುಂಟು. ಇದ ನಿಶ್ಚೈಸಿ ನೋಡಿ ಚನ್ನಮಲ್ಲಿಕಾರ್ಜುನ ದೇವರಲ್ಲಿ.

ಅಲ್ಲಮ :–ಇದು ಎನಗೆ ಆಶ್ಚರ್ಯ, ಹೇಳವ್ವಾ ಕಾಯವಿಲ್ಲದ

ಸುಖವ, ಜೀವವಲ್ಲದ ಭಾವವ, ಆ ಠಾವ ಹೇಳಾ ಗುಹೇಶ್ವರ ಲಿಂಗಕ್ಕೆ.

ಅಕ್ಕ :–ಮರೆದೊರಗಿ ಕನಸಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು. ಖಣನಿಧಾನ ಎದ್ದು ಕರೆಯಿತ್ತು. ಹೆಪ್ಪಿಟ್ಟ ಪಾಲು ಗಟ್ಟಿದುಪ್ಪವಾಗಿ ಸಿಹಿಯಾಯಿತ್ತು. ಇದಕ್ಕೆ ತಪ್ಪ ಸಾಧಿಸಲೇಕೆ ಚನ್ನಮಲ್ಲಿಕಾರ್ಜುನ ದೇವರ ದೇವಸಣ್ಣಗಳಿರಾ ?

ಅಕ್ಕ ಅಲ್ಲಮರ ವಾದ ಹೀಗೆಯೇ ಕೊನೆಗೊಂಡಿತು, ಇಷ್ಟೇ ನಡೆಯಿತು ಎಂದಲ್ಲ ; ಮುಖ್ಯವಾಗಿ ಆಗಿನ ಕಾಲದಲ್ಲಿ ಹಿರಿಯ ಅನುಭಾವಿಗಳ ನಡುವೆ ವಾದವಿವಾದಗಳು ಹೇಗೆ ನಡೆಯು ತ್ತಿದ್ದುವು ಎಂಬುದನ್ನೂ ಅವು ಎಷ್ಟು ಉದ್ಬೋಧಕವೂ ತತ್ವ ಪ್ರಭಾವಯುತವೂ ಆಗಿರುತ್ತಿದ್ದುವು ಎಂಬುದನ್ನೂ ನಾವಿಲ್ಲಿ ಕಂಡುಕೊಳ್ಳಬಹುದು. ಅಕ್ಕನೇ ಹೇಳಿದಂತೆ "ಮರಮರ ಮಥಿನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡ ಲಾಯಿತ್ತು. ಆತ್ಮಪಾತ್ರ ಮಥಿನಿಸಿ ಅನುಭಾವ ಹುಟ್ಟಿ, ತನು ಗುಣಾದಿಗಳ ಸುಡಲಾಯಿತ್ತು" ಶಿವಾನುಭವ ಮಂಟಪದ ಶಿವ ಶರಣರ ಗೋಷ್ಠಿಯಲ್ಲಿ ಅಕ್ಕನು ತನ್ನ ಹೃದಯ ಸಮುದ್ರವನ್ನು ಮಥಿನಿಸಿ ಅಂತರಾತ್ಮನನ್ನು ಸಾಧಿಸುವ ಅನುಭವಾಮೃತವನ್ನು ಪಡೆದಳು. "ವಾದೇ ವಾದೇ ಜಾಯತೇ ತತ್ವಬೋಧಃ" ಎನ್ನುವ ಮಾತು ಇಂತಹ ವಾದಕ್ಕೆ ಸರಿಯಾಗಿ ಅನ್ವಯಿಸುತ್ತದೆ. ಸಂಗದಿಂದ ಅಗ್ನಿ, ಸಂಗದಿಂದ ಅಂಕುರ, ಸಂಗದಿಂದ ದೇಹ ಹುಟ್ಟುವುದು ಸಹಜವಿರುವಂತೆ ಸಂಗದಿಂದ "ಆತ್ಮಮಥನ"ವೂ ಅದರಿಂದ ಅನುಭಾವವೂ ಅದರಿಂದ ಲಿಂಗಾಂಗಸಾಮರಸ್ಯವೂ ಹುಟ್ಟುವುದು ವಾಸ್ತವ; ಸಹಜ ಸತ್ಯ. ಈ ಸತ್ಯದ ಸಾಕ್ಷಾತ್ಕಾರ ಅಕ್ಕನಿಗೆ ಶರಣರ ಸಂಗದಿಂದ ಸಿದ್ಧಿಸಿತು.

ಅಕ್ಕನ ನಿರ್ಮಲವಾದ ಶೀಲಚಾರಿತ್ರವನ್ನೂ ಆಧ್ಯಾತ್ಮಿಕ ಜೀವನವನ್ನೂ ಕಂಡು ಕಲ್ಯಾಣದ ಶರಣರೆಲ್ಲರೂ ಆಕೆಯನ್ನು ವಿಶೇಷವಾಗಿ ಗೌರವಿಸಿದರು. "ಅಂಗನೆ ಅಂಗನೆಯ ರೂಪಲ್ಲದೆ ಮನ ವಸ್ತು ಭಾವದಲ್ಲಿ ಬೆಚ್ಚಂತೆ ಇಪ್ಪಳು. ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲ. ಅಕ್ಕ ಗುಹೇಶ್ವರ ಲಿಂಗದಲ್ಲಿ ಉಭಯ ಸಾಸ್ತಿ ಮನವಳಿದೆ, ಎನ್ನಕ್ಕಾ !" ಎಂದು ಅಲ್ಲಮಪ್ರಭುದೇವರು ಅಕ್ಕನನ್ನು ಕೊಂಡಾಡಿದರು. "ಹೆಂಗುಸಿನಂಗವ ನೋಡಿರೆ ಪುರಾತನರು, ಬಾಲತನದಂಗವ ನೋಡಿರೆ ಪುರಾತನರು, ಬ್ರಹ್ಮವ ನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ ಲಿಂಗವಂತರು, ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರವೋಗದೆ ಇಪ್ಪ ಇರುವು ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು" ಎಂದು ಬಸವಣ್ಣನವರು ಹೊಗಳಿದರು. "ಅಜಕೋಟಿ ವರುಷದವರೆಲ್ಲರೂ ಹಿರಿಯರೆ ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ ? ನಡು ಮುರಿದು ಗುಡಗೂರಿ ತಲೆ ನಡುಗಿ ನರೆತೆರೆ ಹೆಚ್ಚಿ ಮತಿಗೆಟ್ಟು ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ ? ಅನುವರಿದು ಘನವ ತಿಳಿಸಿ ಹಿರಿದು ಕಿರಿದೆಂಬ ಭೇದವ ಮರೆದು ಕೂಡಲ ಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು" ಎಂದು ಚೆನ್ನಬಸವಣ್ಣನವರು ಅಕ್ಕನನ್ನು ಸ್ತೋತ್ರ ಮಾಡಿದರು.

ಹೀಗೆ ಎಲ್ಲ ಶರಣರ ಮೆಚ್ಚಿಕೆಗೆ ಪಾತ್ರಳಾಗಿ ಅವರೆಲ್ಲರ ದಿನ ದಿನದ ಶಿವಾನುಭವಸಂಬಂಧವಾದ ಆಧ್ಯಾತ್ಮಿಕ ಚರ್ಚೆಗಳಲ್ಲಿ ಭಾಗಿಯಾಗಿ ಅಕ್ಕ ಬರಬರುತ್ತ ಸಂಪೂರ್ಣವಾಗಿ ಲಿಂಗಾಂಗ ಸಾಮರಸ್ಯಜ್ಞಾನದ ರಹಸ್ಯವನ್ನು ಅರಿತುಕೊಂಡಳು ; ಸ್ವ

ಸ್ವರೂಪಜ್ಞಾನವನ್ನು ಪಡೆದುಕೊಂಡಳು. "ಅದ್ವೈತದಿಂದ ತನ್ನ ತಾನರಿದು ತಾನಾದರೆ ಚನ್ನಮಲ್ಲಿಕಾರ್ಜುನಲಿಂಗ ತಾನೆ ಬೇರಿಲ್ಲ." ಎನ್ನುವ ಭಾವ ಅವಳಲ್ಲಿ ಬಲಿಯಿತು. "ಎಲ್ಲ ಎಲ್ಲವನರಿದು ಫಲವೇನಯ್ಯ ತನ್ನ ತಾನರಿಯಬೇಕಲ್ಲದೆ ?" ಎನ್ನುವುದರ ಅರಿವಾಯಿತು. "ತನ್ನಲ್ಲಿದ್ದುದ ತಾನರಿಯದನ್ನಕ್ಕ ಹೇಳಿದೊಡೇನು ? ಕೇಳಿದೊಡೇನು ?" ತನ್ನಲ್ಲಿದ್ದುದು "ಅಪಾರ ಮಹಿಮ ಚನ್ನಮಲ್ಲಿಕಾರ್ಜುನ" ಎನ್ನುವ ಅಂಶ ಮನವರಿಕೆಯಾಯಿತು.

ಅಯ್ಯ, ದೂರದಲಿರ್ದಿಹೆ ಎಂದು ಬಾಯಾರಿ ಬಳಲುತಿರ್ದೆನಯ್ಯ, ನಾನು
ಅಯ್ಯ, ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ
ಇನ್ನಾರತಿ ಎಲ್ಲವೂ ಲಿಂಗ, ಆಲಿ ನಿಮ್ಮಲ್ಲಿ ನಟ್ಟವು ನೋಡಯ್ಯ
ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ನನ್ನ ಕರಸ್ಥಲದಲ್ಲಿ
ನೋಡಿ ನೋಡಿ ಕಂಗಳೇ ಪ್ರಾಣವಾಗಿರ್ದೆನೆಯ್ಯಾ.

ತನ್ನ ಹೃದಯದಲ್ಲಿಯೇ ನೆಲಸಿದ್ದ ಪರಮಾತ್ಮನನ್ನು ತಾನು ಅರಿತಮೇಲೆ ಆತನ ವಿಷಯವಾಗಿ ಅಕ್ಕ ಹೀಗೆ ಹಾಡಿಕೊಂಡಳು

"ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚನ್ನಮಲ್ಲಿಕಾರ್ಜುನನ ನಿಲವನಾರು ಅರಿಯಬಾರದು."

ಇನ್ನು ಅಕ್ಕ ಮಾಡಬೇಕಾದುದು ಏನೂ ಉಳಿಯಲಿಲ್ಲ. ಅವಳ ತನು, ಮನ, ಪ್ರಾಣ, ಅರಿವು ಇಷ್ಟೂ ಚನ್ನನಲ್ಲಿ ಸ್ವಯವಾಯಿತು.

"ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ ?
ಮನ ನಿಮ್ಮ ರೂಪಾದ ಬಳಿಕ ನಾನಾರನೆನೆವೆ ?
ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ ?
ಚನ್ನಮಲ್ಲಿಕಾರ್ಜುನಾ, ನಿಮ್ಮತ್ತ ನೀವಾಗಿ ನಿಮ್ಮಿಂದ ನಿಮ್ಮ
ಮರೆದೆನಯ್ಯಾ.

ಅಕ್ಕ ಕಲ್ಯಾಣಕ್ಕೆ ಬಂದು ಕಲ್ಯಾಣವನ್ನೆ ಸಾಧಿಸಿದಳು. ಇನ್ನು ಅವಳಿಗೆ ಅಲ್ಲಿರುವುದು ಸೂಕ್ತವಲ್ಲವೆನಿಸಿತು. ತನ್ನ ನಲ್ಲ ನನ್ನು ಏಕಾಂತದಲ್ಲಿ ಸಾಧಿಸುವ ಲಗುಬಗೆಯಿಂದ ಆಕೆ ಕಲ್ಯಾಣ ವನ್ನೂ ಅಲ್ಲಿ ತನಗೆ ಗುರುಸ್ಥಾನದಲ್ಲಿ ನಿಂತು ಉಪದೇಶಗೈದ ಶರಣ ಸಂದೋಹವನ್ನೂ ಬೀಳ್ಕೊಂಡು ಶ್ರೀಶೈಲದ ಕಡೆಗೆ ಬರು ತ್ತಾಳೆ. ಹೀಗೆ ಹೊರಡುವಾಗ ಬಸವಾದಿಗಳನ್ನು ಕೃತಜ್ಞತೆ ಯಿಂದ ಸ್ಮರಿಸುವುದಲ್ಲದೆ ತನ್ನ ಶೀಲಚಾರಿತ್ರಗಳಿಂದ ಅವರ ಉಪದೇಶಕ್ಕೆ ತಕ್ಕ ಕೀರ್ತಿಯನ್ನು ಗಳಿಸಿಕೊಡುವೆನೆಂದು ಹೇಳಿ ಹೊರಡುವಳು.

"ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ.
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ಮುಂಡಗೆ ಹೂವ ತಹೆನಲ್ಲದೆ ಹುಲ್ಲ ತಾರೆನು.
ಅವಧರಿಸಿ ನಿಮ್ಮಡಿಗಳೆಲ್ಲರು
ಮರಳಿ ಬಿಜಯಂಗೈವುದು ಶರಣಾರ್ತಿ."

೫

ನಾವಿನ್ನು ನೋಡುವುದು ಅಕ್ಕನ ಆಧ್ಯಾತ್ಮಿಕ ಜೀವನದ ಕೊನೆಯ ಘಟ್ಟವನ್ನು. ಶ್ರೀ ಶೈಲದ ಉತ್ತುಂಗ ಶಿಖರವನ್ನೇ ರುವ ಅಕ್ಕ ತನ್ನ ಆಧ್ಯಾತ್ಮಿಕ ಜೀವನದಲ್ಲೂ ಕಡೆಯ ಹಂತ ವನ್ನೇರಿ ತನ್ನ ಮುಡಿಯ ಮಾಣಿಕದಂತಹ ಚನ್ನನ ಮಧುರ

ಭಾವದ ಲಿಂಗಾಂಗ ಸಾಮರಸ್ಯದ ಭಾವಸಮಾಧಿಯಲ್ಲಿ ಒಯ್ಯು ಲಾಗುವ ದೃಶ್ಯ ಮನಮೋಹಕವಾದುದು. ಅಕ್ಕ ಕಲ್ಯಾಣ ವನ್ನು ಬಿಟ್ಟು ಬಂದುದು "ಇಂದ್ರನೀಲ ಗಿರಿಯನೇರಿಕೊಂಡು ಚಂದ್ರಕಾಂತ ಶಿಲೆಯ ಅಪ್ಪಿಕೊಂಡು ಕೊಂಬ ಬಾರಿಸುತ್ತ ಕುಂಭ ಕುಚದ ಮೇಲೆ ಶಿವನೆ ನಿನ್ನನಪ್ಪಿಕೊಂಡು ನೆನೆವುತ್ತ ಎಂದಿಪ್ಪೆನೊ ?" ಎನ್ನುವ ಈಯೊಂದು ಜೀವನದ ಶಿವಸಾಪೇಕ್ಷತ್ವದ ತೃಷೆ ಆರಲೆಂದು. ಬಹುಶಃ ಅಕ್ಕ ಶ್ರೀಶೈಲದ ಕಡೆಗೆ ಧಾವಿಸಿ ಬರಲು ಅವಳ ಒಡನೊಡನೆಯೇ ವಸಂತ ಮಾಸವೂ ಧಾವಿಸಿ ಬಂದಿರಬೇಕು. ಎಲ್ಲೆಲ್ಲಿ ನೋಡಿದರೆ ಅಲ್ಲಲ್ಲಿ ಕಣ್ ಮನಗಳನ್ನು ಸೆಳೆಯುವ ಮರಗಿಡಗಳೂ, ಹೂ ಬಳ್ಳಿಗಳೂ ಹುಲ್ಲು ಕಾವಣ ಗಳೂ ಸಿಂಗರಗೊಂಡು ಚನ್ನಮಲ್ಲಿಕಾರ್ಜುನನ ಪೂಜೆಗೆಂದು ಪ್ರಕೃತಿಮಾತೆ ಎತ್ತಿದ ಆರತಿಯಂತೆ ಶೋಭಾಯಮಾನವಾಗಿ ಕಾಣುತ್ತಿದ್ದುವು. ದಿವ್ಯವೂ ಭವ್ಯವೂ ಆದ ಸೃಷ್ಟಿ ರಾಸಲೀಲೆ ಯಲ್ಲಿ ತೊಡಗಿದಂತೆ ಕುಣಿಯುತ್ತಿದ್ದಿತು. ಇಂತಹ ಸುಂದರ ವಾದ ಸೃಷ್ಟಿಯ ನಡುವೆ ಅಣುರೇಣುತೃಣಕಾಷ್ಠದಲ್ಲಿ ಸಂಪೂರ್ಣನಾದ ಚನ್ನಮಲ್ಲಿಕಾರ್ಜುನನು ಮೈವೆತ್ತು ಬಂದಂತೆ ಅಕ್ಕನಿಗೆ ಭಾಸವಾಯಿತು.

"ವನವೆಲ್ಲ ನೀವೆ, ವನದೊಳಗಣ ದೇವತರುವೆಲ್ಲ ನೀವೆ,
ತರುವಿನೊಳಗಾಡುವ ಖಗಮೃಗವೆಲ್ಲ ನೀವೆ,
ಚನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖ ದೋರ"

ಎಂದು ಅಕ್ಕನು ಸೃಷ್ಟಿಯ ಚೈತನ್ಯ ಸ್ವರೂಪನಾದ ಪರ ಮಾತ್ಮನನ್ನು ಬೇಡಿದಳು.

"ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿನೀರನೆರೆದವರಾರಯ್ಯ !
ಕಬ್ಬು ಬಾಳೆ ಹಲಸು ನಾರಿಕೇಳಕ್ಕೆ ಸಿಹಿನೀರನೆರೆದವರಾರಯ್ಯ !

ಕಳವೆಕ್ಕಾಲಿಗೆ ಓಗರದ ಉದಕವನೆರೆದವರಾರಯ್ಯಾ !
ಮರುಗ ಮಲ್ಲಿಗೆ ಪಚ್ಚೆಗೆ ಪರಿಮಳದುದಕವನೆರೆದವರಾರಯ್ಯಾ !"
ಎಂಬ ಭಾವ ಅಕ್ಕನ ಮನದಲ್ಲಿ ಮುಟ್ಟಿತು.

ಯಾವ ಮರ ಗಿಡ ಬಳ್ಳಿಯನ್ನು ನೋಡಿದರೂ ಚಿಗುರು ಮೊಗ್ಗು ಹೂವು ಕಾಯಿ ಹಣ್ಣುಗಳಿಂದ ಜಗ್ಗಿನಿಂತು ಪರಮಾತ್ಮನ ಅಮೋಘವಾದ ಸೃಷ್ಟಿಶಕ್ತಿಯನ್ನು ಉಗ್ಗಡಿಸುತ್ತಿದ್ದವು. ಜೊತೆಗೆ ಹತ್ತೂ ಕಡೆಯಿಂದ ಕೋಗಿಲೆ ಗಿಣಿ ದುಂಬಿ ಮೊದಲಾದ ಚಿತ್ರ ವಿಚಿತ್ರಗಳಾದ ವನ್ಯಪಕ್ಷಿಗಳ ಕಲಕಲನಿನಾದ ಈ ಸೃಷ್ಟಿಯನ್ನು ಗಾನರೂಪದಲ್ಲಿ ವರ್ಣಿಸಿ ತೋರುವಂತೆ ಭಾಸವಾಯಿತು. ಬಳ್ಳಿಯಂತೆ ಚಿಮ್ಮಿಬರುವ ಮಿಂಚು ಬಾಯಿಬಿಟ್ಟು ಮಾತನಾಡಿದಂತೆ, ನಯನಗೋಚರವಾದ ಸೃಷ್ಟಿ ಶಬ್ದಗೋಚರವೂ ಆಗಿ ಪರಿಣಮಿಸಿದುದರ ಫಲವಾಗಿ ಅಕ್ಕ ಈ ಸೃಷ್ಟಿ ಸೌಂದರ್ಯದ ರಸಾವೇಶದ ಆನಂದಾನುಭೂತಿಯಲ್ಲಿ ಪರವಶಳಾದಳು. ಮರ ಗಿಡಗಳಲ್ಲಿ, ನದಿನದಗಳಲ್ಲಿ ಖಗಮೃಗಗಳಲ್ಲಿ ಆ ಆನಂದರಸಮೂರ್ತಿಯಾದ ಚೆನ್ನನನ್ನು ಅರಸಿದಳು.

"ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ,
ನೀವು ಕಾಣಿರೆ.
ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ,
ನೀವು ಕಾಣಿರೆ.
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ,
ನೀವು ಕಾಣಿರೆ.
ಕೊಳನ ತಡಿಯೊಳಾಡುವ ಹಂಸೆಗಳಿರಾ, ನೀವು ಕಾಣಿರೆ,
ನೀವು ಕಾಣಿರೆ.
ಗಿರಿ ಗಹ್ವರದೊಳಾಡುವ ನವಿಲುಗಳಿರಾ, ನೀವು ಕಾಣಿರೆ,
ನೀವು ಕಾಣಿರೆ.
ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ನೀವು ಹೇಳಿರೆ,
ನೀವು ಹೇಳಿರೆ."

ಹೀಗೆ ಕೂಗಿ ಕೊರಲೆತ್ತಿ ನೋಡಿದಳು. ಕಣ್ಣಿಗೆ ಶ್ರೀಗಿರಿ ಕಾಣಿಸಿತು. ಅಲ್ಲಿ;

„ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜೀವಣಿ,
ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತಕ್ಷೇತ್ರ,
ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರುಷಮೃಗ,
ಎಡಹುವ ಹರಳುಗಳೆಲ್ಲ ಚಿಂತಾಮಣಿ.”

ಏಕೆಂದರೆ ಅದು ಚನ್ನನ ನೆಚ್ಚಿನ ಗಿರಿ.

ಈ ಗಿರಿಯನ್ನು ಹತ್ತಿ ಅಕ್ಕ “ಜರಿಸುವರೆ ಜೀಗ ತೋರಾ ಹೊರಹಾಕದಿರಯ್ಯ ! ನಿಮ್ಮಲ್ಲಿ ಸಲಿಸಂದ ತೊತ್ತಾನು” ಎಂದು ಪ್ರಾರ್ಥಿಸಿದಳು. ಪ್ರಾರ್ಥನೆ ಸಾರ್ಥಕವಾಯಿತು

„ಹೊಳೆವ ಕೆಂಜೆಡೆಗಳ, ಮಣಿಮಕುಟ, ಒಪ್ಪುವ
ಸುಲಿಪಲ್ಲ, ನಗೆಮೊಗದ ಕಂಗಳ ಕಾಂತಿಯಿಂ ಈರೇಳು
ಭುವನಮಂ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು.
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು. ಗಂಡ ಗಂಡರೆಲ್ಲ
ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ
ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.”

ನಿಜವಾಗಿ ಅಕ್ಕ ಚನ್ನನನ್ನು ಕೂಡಿ ಬದುಕಿದಳು. ಚಿರಂಜೀವಿಯಾದಳು. ಅಮೃತ ಪುತ್ರಿಯಾದಳು. ಚನ್ನನ ಈರೇಳು ಭುವನಮಂ ಬೆಳಗುವ ದಿವ್ಯಸ್ವರೂಪದ ಜಗಜ್ಯೋತಿಯಲ್ಲಿ ಅಕ್ಕನ ಆತ್ಮದ ಕಿರುಸೊಡರು ಬೆರೆತುಹೋಯಿತು. ಲಿಂಗಾಂಗ ಸಾಮರಸ್ಯದ ಭಾವನಾಸಮಾಧಿಯಲ್ಲಿ ವಿಲೀನವಾಯಿತು. ಅಕ್ಕನೀಗ ಉರಿ ಮುಟ್ಟಿದ ಕರ್ಪೂರ.

"ಲಿಂಗವೆನ್ನೆ, ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ
ಆಯಿತೆನ್ನೆ, ಆಗದೆನ್ನೆ, ನಾನೆನ್ನೆ, ನೀನೆನ್ನೆ ಚನ್ನಮಲ್ಲಿ
ಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ."

ಉಡುತಡಿಯ ಮಲ್ಲಿಗೆ ಶ್ರೀಶೈಲದ ಚನ್ನನ ಅಡಿಗೆ ಸೇರಿತು. ಚನ್ನ 'ಮಲ್ಲಿಕಾರ್ಜುನ'ನಾದ, ಅಕ್ಕ 'ಮಹಾದೇವಿ'ಯಾದಳು.

## ೩. ವಚನಗಳಲ್ಲಿ ಕಾವ್ಯ, ಮತ, ನೀತಿ

ಈ ಮೇಲೆ ಉದಾಹರಿಸಿದ ವಚನಗಳಿಂದಲೇ ಅಕ್ಕನ ವಾಣಿ ಎಂತಹ ಕಾವ್ಯವಾಣಿ ಎನ್ನುವುದನ್ನು ಯಾರಾದರೂ ಅರಿತು ಕೊಳ್ಳಬಹುದು. ಅವಳ ಜೀವನವೇ ಒಂದು ಕಾವ್ಯ. ಅವಳ ಆತ್ಮವೇ ಒಂದು ಕಾವ್ಯದ ನಾಯಕರತ್ನ. ಆದುದರಿಂದಲೇ ಆ ರತ್ನದ ವರ್ಣಚ್ಛವಿಯಂತೆ ಬಣ್ಣ ಬಣ್ಣದ ಕಾಂತಿ ಬೀರುತ್ತವೆ ವಚನಗಳು. ಕೇವಲ ಬಣ್ಣದ ಬೆಡಗು ಈ ವಚನದಲ್ಲಿವೆ ಎಂಬು ದಲ್ಲ. ಇವು ರಸವತ್ತಾಗಿಯೂ ಇವೆ. ಅಕ್ಕನವರ ನುಡಿಹಿಣಿಲು ಮುಟ್ಟಿದಲ್ಲಿ ಮಧು ಸುರಿಸುವ ಕೋಲುಜೇನಿನ ಹಿಣಿಲಿನಂತೆ.

"ಅಳಿಸಂಕುಳವೇ ಮಾಮರವೇ ಬೆಳುದಿಂಗಳೇ ಕೋಗಿಲೆಯೇ
ನಿಮ್ಮ ನಿಮ್ಮನೆಲ್ಲರನು ಒಂದ ಬೇಡುವೆನು
ಚನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ."

ಈ ಒಂದು ವಚನ ಸಾಕು ವಿಪ್ರಲಂಭ ಶೃಂಗಾರರಸ, ಕೋಡಿ ಯೊಡೆದ ಕೆರೆಯಂತೆ ಇಲ್ಲಿ ಹೇಗೆ ಹರಿಯುತ್ತಿದೆ ಎನ್ನುವುದಕ್ಕೆ.

"ಚನ್ನಮಲ್ಲಿಕಾರ್ಜುನ ನೀನು ಇರಿದ ಅಲಗು ಒಡಲಲ್ಲಿ
ಮುರಿದು ಹೊರಳುವುದ ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ !"

ಎನ್ನುವ ವಚನದಲ್ಲಿಯೂ ಇದೇ ಕೋಡಿ ಹರಿಯುವ ಉಬ್ಬ ರದ ಮೊರೆತ ಕೇಳಿಬರುತ್ತದೆ.

"ಶಿರಹರಿದು ಬಿದ್ದಡೆ ಪ್ರಾಣನಿಮಗರ್ಪಿತವೆಂಬೆನು."

ಇಂತಹ ಕಡೆಗಳಲ್ಲಿ ಮಾತು ಶಬ್ದ ಬಹಳ ಸುಲಭ; ಆದರೆ ಅವು ಹೇಳುವ ಭಾವ ಅರ್ಥ ಬಹುದೊಡ್ಡವು.

"ಕಿಡಿಕಿಡಿ ಕೆದರಿದಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು
ಮುಗಿಲು ಹರಿದು ಬಿದ್ದಡೆ, ಎನಗೆ ಮಜ್ಜನಕ್ಕೆರೆದರೆಂಬೆನು
ಗಿರಿ ಮೇಲೆ ಬಿದ್ದಡೆ, ಎನಗೆ ಪುಷ್ಪವೆಂಬೆನು
ಚನ್ನಮಲ್ಲಿಕಾರ್ಜುನಯ್ಯ ಶಿರ ಹರಿದುಬಿದ್ದರೆ ಪ್ರಾಣ
ನಿಮಗರ್ಪಿತವೆಂಬೆನು."

ಈ ಮಾತಿನಲ್ಲಿ ಧೀರವೂ ಗಂಭೀರವೂ ಆದ ಆತ್ಮ ಹೇಗೆ ಕಿಡಿಗರೆಯುತ್ತದೆ, ಮಳೆಗರೆಯುತ್ತದೆ ಎನ್ನುವುದೂ ಸರ್ವಾರ್ಪಣದ ಬಲಿದಾನಕ್ಕೆ ಸಿದ್ಧವಾದ ಜೀವದ ಮನೋಭಾವ ಹೇಗೆ ಹೆಪ್ಪುಗಟ್ಟಿ ನಿಂತಿದೆ ಎನ್ನುವುದೂ ವ್ಯಕ್ತವಾಗುತ್ತದೆ.

'ಊರಸೀರೆಗೆ ಅಗಸ ತದೆಗೊಂಬಂತೆ' 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ' 'ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ' 'ನೀರಕ್ಷೀರದಂತೆ' 'ಶಿಲೆಯ ಮರೆಯು ಹೇಮದಂತೆ' 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ' 'ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆದಂತೆ' 'ಕತ್ತಲೆಯ ಪಾಳಯವ ರವಿ ಹೊಕ್ಕಂತೆ' ಈ ಮೊದಲಾದ ಉಪಮೆಗಳು ಹೇಳುವ ಅರ್ಥವನ್ನು ಪುಷ್ಟೀಕರಿಸಿ ವಿಷಯಗಳನ್ನು ಸುಲಭಗ್ರಾಹ್ಯವಾಗುವಂತೆ ಮಾಡಿವೆ. ಈ ಎಲ್ಲ ಉಪಮೆಗಳೂ ಜೀವಂತ ಉಪಮೆಗಳು. ದಿನದಿನದ ಲೋಕಾನುಭವದಿಂದ ನೇರವಾಗಿ ಸೆಳೆದುಕೊಂಡ ಉಪಮೆಗಳು.

ಉಪಮೆಗಳನ್ನು ಬಳಸಿದಂತೆ ದೃಷ್ಟಾಂತಾಲಂಕಾರವನ್ನು ಬಳಸಿರುವುದು ಈಕೆಯ ವಚನಗಳಲ್ಲಿ ಇನ್ನೊಂದು ಗುಣ. ಲೋಕದಲ್ಲಿ ಹುಟ್ಟಿದವರು ಸಮಾಧಾನಿಯಾಗಿರಬೇಕೆಂದು ಹೇಳುವಾಗ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ !' ಎಂದು ಕೊಡುವ ದೃಷ್ಟಾಂತ, ಅನುಭವಿಗಳ ಸಂಗ ಬೇಕೆನ್ನುವಾಗ 'ಮರಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು.' ಎಂದು ಕೊಡುವ ದೃಷ್ಟಾಂತ, ಚನ್ನಮಲ್ಲಿಕಾರ್ಜುನನನ್ನು ಎಳಸಿದ ಮನ ಬೇರೊಂದಕ್ಕೆ ಎಳಸದು ಎನ್ನುವಾಗ 'ಗಿರಿಯಲ್ಲದೆ ಹುಲು ಮೊರಡಿಯಲ್ಲಾಡುವುದೇ ನವಿಲು' ಎನ್ನುವ ದೃಷ್ಟಾಂತಗಳೂ ಇಂತಹ ಇತರ ಸಂದರ್ಭಗಳಲ್ಲಿ ಬರುವ ದೃಷ್ಟಾಂತಗಳೂ ಬಹು ಸುಂದರವಾಗಿರುತ್ತವೆ. ಇವುಗಳ ಸೊಗಸು ತಿಳಿಯಲೆಂದು ಇನ್ನೂ ಕೆಲವನ್ನು ಆಯ್ದು ಕೊಟ್ಟಿದೆ.

'ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೇ ?' 'ಹಾಲ ಹಿಡಿದು ಬೆಣ್ಣೆಯನರಸಲುಂಟೆ ?' 'ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು ಕಂಡಯ್ಯಾ !' 'ಬಂಜೆ ಬೇನೆಯನರಿಯಳು, ಬಲತಾಯಿ ಮುದ್ದು ಬಲ್ಲಳೇ ?' 'ಹಣ್ಣು ಮೆದ್ದ ಬಳಿಕ ಆ ಮರವನಾರು ತರಿದರೇನು ?'

ಅಕ್ಕನ ವಚನಗಳು ಉಪಮೆ, ರೂಪಕ, ದೃಷ್ಟಾಂತ ಮೊದಲಾದ ಅಲಂಕಾರಗಳಿಂದ ಮೆರುಗು ಪಡೆದಿರುವುದರ ಜೊತೆಗೆ ಅವು ತಮ್ಮವೇ ಆದ ಒಂದು ಬಗೆಯ ಛಂದಸ್ಸಿನ ಲಯಗತಿಯಲ್ಲಿ ನಡೆಯುತ್ತಿರುವುದರಿಂದ ಕೇಳುವುದು ಕಿವಿಗೆ ಹಿತವಾಗಿಯೂ ಇಂಪಾಗಿಯೂ ಇವೆ. ಬಹುಶಃ ಹಿಂದಣ ಶಿವಶರಣರ ವಚನ

ಗಳು ಎಲ್ಲವೂ ಅಲ್ಲದಿದ್ದರೆ ಕೆಲವಾದರೂ ಒಂದು ವಿಧವಾದ ಛಂದೋರೂಪದಲ್ಲಿಯೇ ಇದ್ದು ಅವುಗಳನ್ನು ಶರಣರು ಹಾಡುತ್ತಿದ್ದರೆಂದೇ ತೋರುತ್ತದೆ. ಹೀಗೆ ಹೇಳಲು ಸಾಕಾದಷ್ಟು ಆಧಾರಗಳಿವೆ. ಇದರ ಮೇಲೆ ಈ ಹೊತ್ತು ಕೂಡ ಕೆಲಮಂದಿ ಗಮಕಿಗಳು ದಾಸರ ಕೀರ್ತನೆಗಳಂತೆ ವಚನಕಾರರ ವಚನಗಳನ್ನೂ ರಾಗ ತಾಳಗಳೊಡನೆ ಹಾಡುವ ಪದ್ಧತಿಯನ್ನು ರೂಢಿಗೆ ತರುತ್ತಿದ್ದಾರೆ. ಶಿವಶರಣರ ಕಥೆಗಳನ್ನೆಲ್ಲ ರಗಳೆಯ ರೂಪದಲ್ಲಿ ರಚಿಸಿದ ಹರಿಹರ ಕವಿ ವಚನಗಳನ್ನು 'ಗೀತ' ಗಳೆಂದೇ ಕರೆದಿದ್ದಾನೆ. ಮಾತ್ರವಲ್ಲ, ತನ್ನ ರಗಳೆಗಳಲ್ಲಿ ಶಿವಶರಣರ ವಚನಗಳನ್ನೇ ಛಂದಸ್ಸಿಗೆ ತಿರುಗಿಸಿಕೊಂಡಿದ್ದಾನೆ. ಉದಾಹರಣೆಗೆ ಅಕ್ಕಮಹಾದೇವಿಯ ರಗಳೆಯಲ್ಲಿ "ಆಗಳಾಗಳಿನ ಶಿವಾನುಭವಕ್ಕೆ ನವಗೀತಮಂ ಪಾಡಿ" "ಗೀತಮಂ ಪಾಡುತುಂ ಪೊರಮಟ್ಟು ನಡೆತಂದು" ಎಂದು ಮುಂತಾಗಿ ಬರೆದಿದ್ದಾನೆ. ಅದೇ ರಗಳೆಯಲ್ಲಿ, ಕೊಟ್ಟಭಾಷೆಯನ್ನು ತಪ್ಪಿದ ಕೌಶಿಕನನ್ನು ಅಕ್ಕ ತ್ಯಜಿಸಿ ಬಂದಮೇಲೂ ಆ ಕಾಮುಕನು ಅವಳನ್ನು ಬಿಡಲಾರದೆ ಮತ್ತೆ ಒಲಿಸಿಕೊಳ್ಳುವ ಆಸೆಯಿಂದ ಶಿವಭಕ್ತರ ಸೋಗನ್ನು ತಾಳಿ ಬಂದ ಪ್ರಸಂಗದಲ್ಲಿ ಅಕ್ಕ:

"ಬಿಟ್ಟಪೆನೆಂದೊಡಂ ಬಿಡದು ನಿನ್ನಯ ಮಾಯೆ
ಒಟ್ಟಯಿಸಿ ಬಂದೊಡೊಡವಂದಪ್ಪುದೀ ಮಾಯೆ
ಜೋಗಿಗಂ ಜೋಗಿಣಿಯದಾಯ್ತು ನಿನ್ನಯ ಮಾಯೆ
ರಾಗದಿಂ ಸವಣಂಗೆ ಕಂತಿಯಾಯಿತು ಮಾಯೆ
ಗಿರಿಯನೇರಿದೊಡಿರದೆ ಗಿರಿಯನೇರಿತು ಮಾಯೆ
ಪರಿದಡವಿಯಂ ಪೊಕ್ಕೊಡನೆ ಪೊಕ್ಕುದು ಮಾಯೆ
ಬೆನ್ನಕೈಯಂ ಬಿಡದು ಭಾಪು ಸಂಸಾರವೇ"

ಎಂದು ಹುಯ್ಯಲಿಟ್ಟಂತೆ ಹರಿಹರನು ವರ್ಣಿಸಿದ್ದಾನೆ.

ಅಕ್ಕನವರ ವಚನ ಈ ಸಂದರ್ಭದಲ್ಲಿ "ಬಿಟ್ಟೆನೆಂದರೆ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿತ್ತು ಮಾಯೆ, ಯೋಗಿಗೆ ಯೋಗಿಣಿಯಾಯಿತ್ತು ಮಾಯೆ, ಸವಣಂಗೆ ಸವಣಿಯಾಯಿತ್ತು ಮಾಯೆ....ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ ಭಾಪು ಸಂಸಾರವೇ ಬೆನ್ನಿಂದ ಬೆನ್ನಹತ್ತಿ ಬಂದೆ." ಎಂಬುದೆ ಆಗಿರಬಾರದೇಕೆ?

ಇಂಥ ಕಡೆಗಳಲ್ಲೆಲ್ಲಾ ವಚನದ ಭಾಷೆ ಹೇಗೆ ಬಹು ಸುಲಭ ವಾಗಿ ಕಾವ್ಯದ ಭಾಷೆಯಾಗಿ ಮಾರ್ಪಾಟಾಗಬಹುದು ಎಂಬುದು ಗೊತ್ತಾಗುತ್ತದೆ. ಅಕ್ಕನ ಕಾವ್ಯಮಯವಾದ ವಚನವನ್ನು ಹರಿಹರನು ಛಂದಸ್ಸಿಗೆ ಬಹು ಸುಲಭವಾಗಿ ತಿರುಗಿಸಿಕೊಂಡುದ ರಿಂದಲೇ ಈ ಅಂಶವು ವ್ಯಕ್ತವಾಗುತ್ತದೆ. ಇದರ ಮೇಲೆ ಅಕ್ಕ ಅವುಗಳನ್ನು ಹಾಡಿನ ರೂಪದಲ್ಲಿಯೇ ಕಟ್ಟಿರಬೇಕು. ಹಲಗೆಯ ದೇವರ ಶೂನ್ಯಸಂಪಾದನೆಯ ಪ್ರತಿಯಲ್ಲಿ ಈ ಮಾತಿಗೆ ನಿದರ್ಶನ ಸಿಕ್ಕುತ್ತದೆ. ಅಕ್ಕನ ಒಂದು ವಚನವನ್ನು ಅಲ್ಲಿ ಹಾಡಿನಂತೆ ಬರೆದಿದೆ.

ರಾಗ ಕಾಂಬೋಧಿ

॥ ಪಲ್ಲವಿ ॥

ಎಮ್ಮವರೆನ್ನ ಮದುವೆಯ ಮಾಡಿದರು
ಲಿಂಗಕ್ಕೆನ್ನ ಮದುವೆಯ ಮಾಡಿದರು ॥
ಪಚ್ಚೆಯ ನೆಲಗಟ್ಟು ಕನಕದ ತೋರಣ
ವಜ್ರದ ಕಂಭ ಮಾಣಿಕದ ಚಪ್ಪರವಿಕ್ಕಿ ಮದುವೆ ॥೧॥
ಬಸವ ಬಂದಿಗಟ್ಟಿ ಸಂಗಯ್ಯ ಮದುವಣಿಗ
ಆನು ಮುತ್ತೈದೆ ಶರಣರು ದಿಬ್ಬಣಿಗರು ॥೨॥
ಕಂಕಣಕೈದಾರೆಗಟ್ಟಿ ಸ್ಥಿರ ಸೇಸೆಯನಿಟ್ಟು
ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆನ್ನ
ಮದುವೆಯ ಮಾಡಿದರು ॥೩॥

ಪದಸಹ ವಚನ

ಶ್ರೀಮಾನ್ ಫ. ಗು. ಹಳಕಟ್ಟಿ ಅವರು ಸಂಪಾದಿಸಿದ ಹೊತ್ತಗೆಯಲ್ಲಿ ಈ ಹಾಡು ಹೀಗೆ ಅಚ್ಚಾಗಿದೆ.

"ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದಕಂಭ, ಪವಳದ
ಚಪ್ಪರವನಿಕ್ಕಿ ಮುತ್ತು ಮಾಣಿಕದ ಮೇಲು ಕಟ್ಟ ಕಟ್ಟಿ,
ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ, ಚನ್ನಮಲ್ಲಿಕಾರ್ಜುನ
ನೆಂಬ ಗಂಡಗೆನ್ನ ಮದುವೆಯ ಮಾಡಿದರು."

ಈ ಮೇಲಣ ವಿವೇಚನೆಯಿಂದ ಅಕ್ಕನ ವಚನಗಳು ಕಾವ್ಯಮಯವಾಗಿವೆ ಎಂಬ ಅಂಶವನ್ನು ಅವು ಮೂಲದಲ್ಲಿ ಛಂದೋಬದ್ಧವಾಗಿಯೇ ರಚಿತವಾಗಿದ್ದಿರಬೇಕು ಎನ್ನುವುದರಿಂದಲೂ, ಹಾಗಿಲ್ಲದಿದ್ದರೂ ಛಂದಸ್ಸಿಗೆ ಅವುಗಳನ್ನು ತಿರುಗಿಸಿಕೊಳ್ಳುವುದು ಅಷ್ಟೇನೂ ಕಷ್ಟವಲ್ಲ ಎನ್ನುವುದರಿಂದಲೂ ಸಮರ್ಥಿಸಿದ ಹಾಗಾಯಿತು. ಪದ್ಯವಾಗಲಿ ಗದ್ಯವಾಗಲಿ ಕಾವ್ಯವಾಗುವುದು ಅದರ ಛಂದೋಬದ್ಧರೂಪದಿಂದ ಅಲ್ಲ ಎನ್ನುವುದೇನೋ ನಿಜ. ರಸ, ಭಾವ, ಧ್ವನಿ ಇವು ಕಾವ್ಯದ ಜೀವಾಳ ಎನ್ನುವುದೂ ಸರಿಯೇ. ಆದರೂ ಕಾವ್ಯಜೀವಾಳವಾದ ರಸ, ಧ್ವನಿಗಳೊಂದಿಗೆ ಕೇಳಿದೊಡನೆಯೇ ಕಿವಿಯನ್ನು ಆಕರ್ಷಿಸುವ ಛಂದಸ್ಸಿನ ಲಯಗತಿಯೂ ಸೇರಿದ್ದರೆ ಆ ಕಾವ್ಯ ಇನ್ನೂ ಉತ್ತಮವಾಗುವುದು. ಇಂತಹ ಉತ್ತಮವಾದ ಕಾವ್ಯದ ಸೊಬಗೂ ಕೂಡ ಅಕ್ಕನ ವಚನಗಳಲ್ಲಿ ಕಾಣಬರುತ್ತದೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗಾನೊಲಿದೆನವ್ವ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗಾ
ನೊಲಿದೆ ಎಲೆ ಅವ್ವಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು ॥೧॥

ನಚ್ಚುಗೆ ಮನ ನಿಮ್ಮಲ್ಲಿ ಮಚ್ಚುಗೆ ಮನ ನಿಮ್ಮಲ್ಲಿ
ಸಲಗುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ
ಅಳಲುಗೆ ಮನ ನಿಮ್ಮಲ್ಲಿ ಬಳಲುಗೆ ಮನ ನಿಮ್ಮಲ್ಲಿ
ಕರಗುಗೆ ಮನ ನಿಮ್ಮಲ್ಲಿ ಕೊರಗುಗೆ ಮನ ನಿಮ್ಮಲ್ಲಿ ॥೨॥

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ ॥೩॥

ಕಳವಳದ ಮನವು ತಲೆಕೆಳಗಾದುದವ್ವ
ಸುಳಿದು ಬೀಸುವ ಗಾಳಿ ಉರಿಯಾಯಿತವ್ವ
ಬೆಳುದಿಂಗಳು ಬಿಸಿಲಾಗಿತ್ತು ಕೆಳದಿ
ಹೊಳಲ ಸುಂಕಿಗನಂತೆ ತೊಳಲುತ್ತಿಹೆನವ್ವಾ ॥೪॥

ಚಿಲಿಮಿಲಿಯೆಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ ನೀವು ಕಾಣಿರೆ
ಕೊಳನತಡಿಯೊಳಾಡುವ ಹಂಸಗಳಿರಾ ನೀವು ಕಾಣಿರೆ ನೀವು ಕಾಣಿರೆ
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿ ನೀವು ಕಾಣಿರೆ
ಚನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ
ನೀವು ಹೇಳಿರೆ ॥೫॥

ಈ ಉದಾಹರಣೆಗಳ ಜೊತೆಗೆ ಈ ಹಿಂದೆ ಉದಾಹರಿಸಿರುವ ಇನ್ನಿತರ ವಚನಗಳನ್ನೂ ನೋಡಬಹುದು. ವಚನಗಳಲ್ಲಿ ಕಾಣ ಬರುವ ಸೌಕುಮಾರ್ಯ ಮಾಧುರ್ಯಗಳನ್ನೂ ಅರ್ಥ ಭಾವ ಗಳನ್ನೂ, ಅವುಗಳಿಗೆ ಹೊಂದಿಕೊಂಡು ಬಂದಿರುವ ಪದಬಂಧ ಪ್ರೌಢಿಮೆಯನ್ನೂ ಶ್ರೋತೃಗಳ ಹೃದಯವನ್ನು ರಸಸ್ಯಂದಿಯ ನ್ನಾಗಿ ಮಾಡುವ ನಾದಲೀಲೆಯನ್ನೂ ಓದುಗರೇ ಊಹಿಸಿಕೊಳ್ಳ ಬಹುದು. ಉದಾಹರಣೆಯಲ್ಲಿ ಕಡೆಯದಾಗಿ ಹೇಳಿದ ವಚನ

ವಂತೂ ವಚನ ಸಾಹಿತ್ಯದಲ್ಲಿ- ಏಕೆ ಕನ್ನಡ ಸಾಹಿತ್ಯದಲ್ಲಿ-ಅತ್ಯ ಮೂಲ್ಯವಾದ ಒಂದು ಕಾವ್ಯ ಭಾಗವೆನ್ನಬಹುದು. ಆಧುನಿಕರ ದೃಷ್ಟಿಯಲ್ಲಿ ಅದೊಂದು ಅತ್ಯುತ್ತಮ ಭಾವಗೀತೆ. ತನ್ನ ಆರಾಧ್ಯ ಮೂರ್ತಿಯಾದ ಚನ್ನನನ್ನು ಅರಸಿ ಅರಸಿ ಆತನ ವಿರಹದಿಂದ ತೊಳಲಿ ಬಳಲಿ ತಾಳಲಾರದ ಜೀವ ಕಟ್ಟ ಕಡೆಗೊಮ್ಮೆ ಉಸಿ ರೆಳೆದು ಕೊರಲೆತ್ತಿ ಕರುಳು ಹಿಂಡುವಂತೆ ಕೂಗಿಕೊಳ್ಳುವ ಆರ್ತ ನಾದ ಆ ವಚನದಲ್ಲಿ ತುಂಬಿ ಪ್ರತಿಧ್ವನಿಕೊಡುತ್ತಿದೆ. ತನ್ನ ಸುತ್ತಲು ಚಿಲಿಮಿಲಿ ಎಂದು ಓದುವ, ಸರವೆತ್ತಿ ಪಾಡುವ, ಎರಗಿಬಂದಾಡುವ, ಕೊಳನತಡಿಯೊಳಾಡುವ, ಗಿರಿಗಹ್ವರದೊಳ ಗಾಡುವ ಗಿಳಿ, ಕೋಗಿಲೆ, ತುಂಬಿ, ಹಂಸೆ, ನವಿಲು ಹೀಗೆ ಸುಂದ ರವಾದ ಸೃಷ್ಟಿಯನ್ನು ಸುಂದರತರವನ್ನಾಗಿ ಮಾಡಿದ ಈ ವನ್ಯ ಪಕ್ಷಿಗಳನ್ನು ಸಂಬೋಧಿಸಿ ಅಕ್ಕ ಚನ್ನಮಲ್ಲಿಕಾರ್ಜುನನನ್ನು ನೀವು ಕಾಣಿರೆ ಎಂದು ಕೇಳುತ್ತಾಳೆ. ಅವಳ ಮಾತೆಪ್ರತಿಧ್ವನಿಯ ರೂಪ ದಲ್ಲಿ ಅವಳಿಗೆ ಉತ್ತರವಾಗಿ ಬಂದಿತೋ ಎಂಬಂತೆ ನೀವು ಕಾಣಿರೆ ಎಂದು ಮತ್ತೊಮ್ಮೆ ಕೇಳಿಸುವುದು ಅಥವಾ ಅಕ್ಕನಂತೆಯೇ ಗಿಳಿ ನವಿಲು ಕೋಗಿಲೆಗಳೂ ಚನ್ನನನ್ನು ಅರಸುತ್ತಿದ್ದು ಅಕ್ಕನ ಪ್ರಶ್ನೆಗೆ ನೀವು ಕಾಣಿರೆ ಎಂದು ತಾವೂ ಪ್ರಶ್ನಿಸಿದಂತೆ ಮತ್ತೊಮ್ಮೆ ಕೇಳಿಸುವುದು. ಇಷ್ಟು ಮಾತ್ರವಲ್ಲದೆ, ಸೃಷ್ಟಿಯ ಸಮಸ್ತ ಚರಚರಾ ವಸ್ತುವಿನಲ್ಲಿಯೂ ಪರಮಾತ್ಮನು ಅಂಶ ರೂಪದಲ್ಲಿ ಅಡಗಿರುವನೆಂದೂ ಆದುದರಿಂದಲೇ ತನ್ನಲ್ಲಿ ಪರ ಮಾತ್ಮನನ್ನು ಕಂಡುಕೊಂಡು ಅನುಭಾವಿ ಇತರ ವಸ್ತುಗಳಲ್ಲೂ ಪರಮಾತ್ಮನನ್ನು ಕಾಣುವ ಸಮರಸ ಭಾವದಲ್ಲಿ ತಲ್ಲೀನನಾಗುವ ನೆಂದೂ ಆದುದರಿಂದಲೇ ಅಕ್ಕನಂತಹ ಅನುಭಾವಿ ಈ ಗಿಳಿ ಕೋಗಿಲೆಗಳನ್ನು ಪರಮಾತ್ಮನನ್ನು ನೀವು ಕಾಣಿರೆ, ನೀವು

ಕಾಣಿರೆ ಎಂದು ಕಾತರಳಾಗಿ ನುಡಿಸಿದಳೆಂದೂ ಇಟ್ಟುಕೊಳ್ಳಬಹುದು. ಇಲ್ಲಿ ಅರ್ಥ ಭಾವ ಎಷ್ಟು ಉದಾತ್ತವಾಗಿವೆಯೋ ಮಾತು ರೀತಿ ಅಷ್ಟು ಸುಲಭವಾಗಿರುವುದೇ ಒಂದು ವಿಶೇಷ. ಹೃದಯದಲ್ಲಿ ನಿಜವಾದ ರಸಾವೇಶವುಂಟಾದಾಗ ಭಾವ ಹೀಗೆ ಶಬ್ದಮಯವಾಗಿ ನಾದಮಯವಾಗಿ ಛಂದೋಬದ್ಧವಾಗಿ ಹೊರಹೊಮ್ಮುತ್ತದೆ; ವೀಣೆಯಿಂದ ವಾಣಿ, ಬಳ್ಳಿಯಿಂದ ಹೂ, ಮುಗಿಲಿನಿಂದ ಮಿಂಚು, ಹೊಮ್ಮುವಂತೆ.

ಅಕ್ಕನ ಈ ವಚನವನ್ನು ಓದಿದಾಗಲೆಲ್ಲಾ ಅಭಿನವ ಪಂಪನೆಂದು ಹೆಸರು ಪಡೆದ ನಾಗಚಂದ್ರ ಕವಿಯ ಪದ್ಯವೊಂದು ಜ್ಞಾಪಕಕ್ಕೆ ಬರುತ್ತದೆ. ಆತ ಬರೆದ ರಾಮಾಯಣ ಕಾವ್ಯದಲ್ಲಿ ಸೀತಾಹರಣದ ಕತೆಯನ್ನು ಹೇಳುವಾಗ ರಾವಣನಿಂದ ಅಪಹೃತಳಾದ ಸೀತೆಯನ್ನು ಕುರಿತು ರಾಮಚಂದ್ರನು ಸುತ್ತಣ ಅರಣ್ಯ ಪ್ರದೇಶದಲ್ಲೆಲ್ಲ ಹುಡುಕಿ ವೈದೇಹಿಯನ್ನು ಆ ವನಾಂತರದಲ್ಲಿ ಎಲ್ಲಿಯೂ ಕಾಣದೆ ಇದ್ದಾಗ



ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯ ನಿಶ್ವಾಸೆಯಂ
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋ
ಕಿಳಮೇ ಕಂಡರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ

ಎಂದು ಕಣ್ಣಿಗೆ ಕಂಡ ಪ್ರಕೃತಿಯ ಎಲ್ಲ ಸ್ಥಾವರ ಜಂಗಮ ಸತ್ವಗಳಿಗೂ ಮೊರೆಯಿಟ್ಟನೆಂದು ನಾಗಚಂದ್ರನು ವರ್ಣಿಸಿದ್ದಾನೆ. ಈ ಎರಡು ಕಾವ್ಯಭಾಗಗಳನ್ನು ಹೋಲಿಸಿ ನೋಡಿದರೆ ವೈದೃಶ್ಯಕ್ಕಿಂತ ಸಾದೃಶ್ಯವೇ ಹೆಚ್ಚು ಮನವರಿಕೆಯಾಗುತ್ತದೆ. ಸಂದರ್ಭ ಸನ್ನಿವೇಶಗಳೂ ವರ್ಣನೆ ವಿವರಣೆಗಳೂ ಕವಿ

ಹೃದಯದ ಮಧುರಭಾವವನ್ನೇ ವ್ಯಕ್ತಪಡಿಸುತ್ತವೆ. ಈ ಎರಡ ರಲ್ಲೂ ಕರುಣೆ ಸೋನೆ ಮಳೆಗರೆಯುತ್ತಿದೆ.

ಅಕ್ಕನ ವಚನಗಳಲ್ಲಿ ಭಾವೋತ್ಕರ್ಷತೆಯಿದೆ; ಅರ್ಥ ಗೌರವವಿದೆ; ಮಧುರ ಪದಬಂಧವಿದೆ; ಆಲಂಕಾರಿಕ ಪರಿಭಾಷೆ ಇದೆ. ಒಂದು ಮಾತಿನಲ್ಲಿ ಹೇಳುವುದಾದರೆ ಉತ್ತಮ ಕವಿ ಜೀವನದ ಎಲ್ಲ ಸಂಸ್ಕಾರವೂ ಹೃದಯದ ಎಲ್ಲ ರಸಾನುಭವವೂ ಕಂಡುಬರುತ್ತಿವೆ. ಕನ್ನಡದ ಶಾರದೆ ಅವಳ ನಾಲಗೆಯಲ್ಲಿ ನೆಲಸಿ ಬಿಡಿ ಕವನಗಳಂತಿರುವ ವಚನ ಮುಕ್ತಕಗಳನ್ನು ಅವಳಿಂದ ಹಾಡಿಸಿದ್ದಾಳೆ.

ಅಕ್ಕನ ವಚನಗಳಲ್ಲಿ ನೀತಿಗೆ ಮಹತ್ವ ಸ್ಥಾನವಿಲ್ಲವೆಂದರೆ ಬಹುಶಃ ತಪ್ಪಾಗಲಾರದು. ಏಕೆಂದರೆ ಅಕ್ಕ ಬಸವ. ಚನ್ನ ಬಸವ, ಅಲ್ಲಮ, ಸಿದ್ಧರಾಮಾದಿಗಳಂತೆ ವೀರಶೈವಮತ ಧರ್ಮವನ್ನು ಜನಕ್ಕೆ ಬೋಧೆಮಾಡುವುದನ್ನೂ ಆ ಸಮಾಜದ ಲೋಪದೋಷಗಳನ್ನು ತಿದ್ದಿ ಜನರನ್ನು ಸತ್ಪುರುಷರನ್ನಾಗಿ ಮಾಡುವುದನ್ನೂ ತಮ್ಮ ಜೀವನದ ಧ್ಯೇಯೋದ್ದೇಶವನ್ನಾಗಿ ಇಟ್ಟುಕೊಂಡವರಲ್ಲ. ಏನಿದ್ದರೂ ಎಂತಿದ್ದರೂ ಅಕ್ಕನ ಜೀವನದ ಗುರಿ, ಏಕಾಂತದಲ್ಲಿ ತನ್ನ ಪ್ರೀತಿಯ ಚನ್ನಮಲ್ಲಿಕಾರ್ಜುನನನ್ನು ನಿರ್ಹೇತುಕವಾದ ನಿಶ್ಚಲ ಭಕ್ತಿಯಿಂದ ಸಾಧಿಸಿ ಕೃತಕೃತ್ಯತೆ ಯನ್ನು ಪಡೆಯುವುದೇ ಆಗಿದ್ದಿತು. ಅವಳೊಬ್ಬ ಹಿರಿಯ ಅನುಭಾವಿಯಾಗಿ ಆಧ್ಯಾತ್ಮಿಕ ವ್ಯಕ್ತಿಯಾಗಿ ಬಾಳಿದವಳು; ಮತಪ್ರವರ್ತಕಳಾಗಿ ಪ್ರಚಾರಕಳಾಗಿ ಬಾಳಿದವಳಲ್ಲ. ಆದುದ ರಿಂದಲೇ ಅವಳ ವಚನಗಳಲ್ಲಿ ಅತಿಗಹನವೂ ಜಟಿಲವೂ ಆದ ಮತ ಧರ್ಮ ತತ್ವಗಳನ್ನು ಕುರಿತ ಉಪದೇಶಗಳಾಗಲಿ, ಭಕ್ತಿ ಜ್ಞಾನ ವೈರಾಗ್ಯಗಳನ್ನು ಕುರಿತ ಬೋಧೆಗಳಾಗಲಿ ಕಂಡುಬರುವು

ದಿಲ್ಲ. ಒಂದು ವೇಳೆ ಕಂಡುಬಂದರೂ ಇವು ಬರುವ ಸನ್ನಿವೇಶ ಅಕ್ಕನ ಸತಿಪತಿ ಭಾವದ ಪಾರಮಾರ್ಥಿಕ ಶೃಂಗಾರದ ಪ್ರಪಂಚ ದಲ್ಲಿಯಾದುದರಿಂದ ಅಲ್ಲಿ ಇವು ನೀರಸವಾಗುವುದಿಲ್ಲ. ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ವಿವರಿಸುವಾಗ ಅಕ್ಕನವರು ಅನಿ ವಾರ್ಯವಾಗಿ ಆದರೆ ಅಕೃತಕವಾಗಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಮತಧರ್ಮಗಳ ಮಾತಾಗಿ ಹೇಳಿದ್ದಾರೆ.

ಎಲ್ಲ ಮತಬೋಧಕರೂ ತತ್ತ್ವೋಪದೇಶಕರೂ ಅಹಿಂಸೆ ಯನ್ನು ಕುರಿತು ಜನಕ್ಕೆ ಉಪದೇಶ ಮಾಡಿದಂತೆ ಅಕ್ಕನೂ ತನ್ನದೊಂದು ವಚನದಲ್ಲಿ ಈ ತತ್ತ್ವವನ್ನು ಬಹು ಸುಂದರವಾಗಿ ಪ್ರತಿಪಾದಿಸಿದ್ದಾಳೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ,
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ.
ತನ್ನ ಮನೆಯಲ್ಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕೇಕೆ ಮರುಗನು ?
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ.
ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ
ಭಕ್ತನಾಗಿರ್ದು ಜೀವಹಿಂಸೆಯ ಮಾಡುವ
ಮಾದಿಗರನೇನೆಂಬೆನಯ್ಯ.

ನಿರ್ಮಲವಾದ ಮನಸ್ಸಿನಿಂದ ಭಗವಂತನನ್ನು ಭಕ್ತನು ಅನುಸಂಧಾನ ಮಾಡಬೇಕೆಂಬುದನ್ನೂ ಈ ಕೆಳಗಣ ವಚನದಿಂದ ಅರಿತುಕೊಳ್ಳಬಹುದು.

ಕಡೆಗೆ ಮಾಡಿದ ಭಕ್ತಿ ದೃಢವಿಲ್ಲದಾಳುತನ
ಮೃಡನೊಲಿದು ಹೇಳಿದರೆ ಎಂತೊಲಿವನಯ್ಯ
ಮಾಡಲಾಗದು. ಅಳಿಮನವ ಮಾಡಿದೊಡೆ
ಮನದೊಡೆಯ ಬಲ್ಲನೈಸೆ.

ಪುರಂದರಾದಿ ದಾಸವರೇಣ್ಯರು ಹೊಲೆಯನಾರು ಎನ್ನುವ ಪ್ರಶ್ನೆಗೆ "ಜಾತಿಯಿಂದಲ್ಲ ನೀತಿಯಿಂದ ಹೊಲೆಯ" ಎಂದು ಉತ್ತರವಿತ್ತಂತೆ ಅಕ್ಕನವರಾದರೂ ಭವಿ ಯಾರು ಎನ್ನುವ ಪ್ರಶ್ನೆಗೆ ಅರಿಷಡ್ವರ್ಗಾದಿಗಳೇ ಭವಿಗಳು ; ಅವುಗಳನ್ನು ಕಳೆದವರೆ ಶರಣರು ಎಂದು ಹೇಳಿದ್ದಾರೆ.

ಶೀಲ ಶೀಲವೆಂತೆಂಬಿರಯ್ಯ
ಶೀಲದ ನೆಲೆಯ ಬಲ್ಲರೆ ಹೇಳಿರೊ
ಅರಿಯದಿರ್ದೊಡೆ ಕೇಳಿರೊ
ಕಾಮವೊಂದು ಭವಿ ಕ್ರೋಧ ಎರಡನೆಯ ಭವಿ
ಲೋಭ ಮೂರನೆಯ ಭವಿ ಮೋಹ ನಾಲ್ಕನೆಯ ಭವಿ
ಮದ ಐದನೆಯ ಭವಿ ಮತ್ಸರ ಆರನೆಯ ಭವಿ
ಆಮಿಷ ಏಳನೆಯ ಭವಿ. ಇಂತೀ ಏಳು ಭವಿಗಳ
ತಮ್ಮೊಳಗಿಟ್ಟುಕೊಂಡು ಲಿಂಗವಿಲ್ಲಿದವರ ಭವಿ ಭವಿ ಎಂಬರು.
ಹುಸಿ ಎಂಬುದೇ ಹೊಲೆ. ಶಿವಭಕ್ತಂಗೆ ಹುಸಿಯೆಂಬುದುಂಟೆ ?
ಅಯ್ಯಾ ಹುಸಿಯನಾಡಿ ಲಿಂಗವ ಪೂಜಿಸಿದಡೆ
ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ ಚನ್ನಮಲ್ಲಿಕಾರ್ಜುನಾ.

ಮನಸ್ಸು ನಿರ್ಮಲವಿಲ್ಲದಿದ್ದಾಗ ತೀರ್ಥಕ್ಷೇತ್ರಗಳನ್ನು ಬಳಸಿ ಬರುವುದು ವ್ಯರ್ಥವೆಂದೂ ಏಕೋಭಾವದಿಂದ ಕರಸ್ಥಲದ ಇಷ್ಟ ಲಿಂಗವೊಂದನ್ನೇ ಪೂಜಿಸಿ ಮುಕ್ತಿ ಪಡೆಯಬಹುದೆಂದೂ ಅಕ್ಕ ಹೇಳಿದ್ದಾಳೆ.

ಹಾಲಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ ?
ಲಿಂಗದ ಪಾದತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯ ಶಾಸ್ತ್ರಕ್ಕೆ ಹಾರೈಸಲೇತಕ್ಕೆ
ಗುರುಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಗಳು

ಎಲ್ಲ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯ
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದು ಮಾಡಿ
ತೀರ್ಥಲಿಂಗವ ಹಿರಿದುಮಾಡಿ ಹೋದಾತಂಗೆ
ಅಘೋರ ನರಕ ತಪ್ಪದು ಕಾಣಾ ಚನ್ನಮಲ್ಲಿಕಾರ್ಜುನಾ.

ಶಿವಭಕ್ತನಾದವನು ಸಜ್ಜನರಾದ ಶಿವಶರಣರ ಸಂಗ ಸಹವಾಸ ದಲ್ಲಿ ನಿರತನಾಗಿರಬೇಕೆಂಬುದನ್ನು ಅಕ್ಕ

ಅರಿಯುವವರೊಡವೆ ಸಂಗವ ಮಾಡಿದರೆ
ಕಲ್ಲುಹೊಯ್ದು ಕಿಡಿಯು ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವಮಾಡಿದರೆ
ಹೊಸೆದು ಬೆಣ್ಣೆಯು ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗ
ಕರ್ಪೂರ ಗಿರಿಯು ಉರಿ ಕೊಂಡಂತೆ

ಎಂದು ಬಹು ಮನೋಜ್ಞವಾಗಿ ವಿವರಿಸಿದ್ದಾಳೆ.

ಎಲ್ಲ ವಚನಕಾರರಂತೆ ಅಕ್ಕನೂ ಸಂಸಾರನಿರಸನವನ್ನೂ ಮಾಯಾಮುವ ಭಂಗವನ್ನೂ ತನ್ನ ವಚನಗಳಲ್ಲಿ ಮೇಲಿಂದ ಮೇಲೆ ನಿರೂಪಿಸಿದ್ದಾಳೆ. "ಸಂಸಾರ ಬೆಂಬಿಡದೆ ಕಾಡುತ್ತಿದೆ ಯಯ್ಯಾ" "ಸಂಸಾಸವೆಂಬ ಹಗೆಯಯ್ಯಾ ತಂದೆ" 'ಮಾಯದ ಮದ' 'ಕಾಯದ ಕತ್ತಲೆ' 'ಜೀವದ ಜಂಜಡ' 'ಸಂಸಾರ ನಿಸ್ಸಾರ' 'ಬಿಟ್ಟೆನೆಂದರೆ ಬಿಡದೀ ಮಾಯೆ ಬಿಡದಿದ್ದರೆ ಬೆಂಬ ತ್ತಿತ್ತು ಮಾಯೆ' 'ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ ಇಂದ್ರನ ನುಂಗಿತ್ತು ಮಾಯೆ ಚಂದ್ರನ ನುಂಗಿತ್ತು ಮಾಯೆ' ಈ ಎಲ್ಲ ಮಾತುಗಳಿಂದ ಅಕ್ಕ ಸಂಸಾರದ ಸುಖವನ್ನು ಕ್ಷಣ ಭಂಗುರವೆಂದೂ ನಶ್ವರವೆಂದೂ ದುಃಖಮೂಲ ವೆಂದೂ ಇದಕ್ಕೆ ಕಾರಣ ಈ ಸಂಸಾರ ಮಾಯಾ ಬದ್ಧವಾದು

ದೆಂದೂ ಲೋಭ ಮೋಹ ಮದ ಮತ್ಸರಾದಿಗಳಿಂದ ಭ್ರಾಂತ್ಯುತ್ಪಾದಕವಾದುದೆಂದೂ ಹೇಳಿದ್ದಾಳೆ. ಆದುದರಿಂದಲೇ ಜನ್ಮಗಳಲ್ಲೆಲ್ಲಾ ಶ್ರೇಷ್ಠವಾದ ನರಜನ್ಮದಲ್ಲಿ ಪುರುಷಾರ್ಥಗಳಲ್ಲೆಲ್ಲಾ ಶ್ರೇಷ್ಠವಾದ ಮೋಕ್ಷವನ್ನು ಮಾನವನು ಗಳಿಸಿಕೊಳ್ಳಬೇಕೆಂದು ಅಕ್ಕ ಸಾರಿ ಹೇಳಿದಳು.

ವೇದಶಾಸ್ತ್ರ ಪುರಾಣಾಗಮಂಗಳೆಲ್ಲ ಕೊಟ್ಟಣವ ಕುಟ್ಟುತ .
ನುಚ್ಚು ತೌಡು ಕಾಣಿಭೋ ! ಇವ ಕುಟ್ಟಲೇಕೆ ?
ಅತ್ತಲಿತ್ತ ಹರಿವ ಮನದ ಶಿರವನರಿವಡೆ
ಬಚ್ಚಬರಿಯ ಬಯಲು, ಚೆನ್ನಮಲ್ಲಿಕಾರ್ಜುನಾ.

ಈ ವಚನದಲ್ಲಿ ಅವಳು ತನ್ನ ಜೀವನದ ಧ್ಯೇಯವನ್ನೇ ಮಂಡಿಸಿದಂತಿದೆ. ಮೊದಲೇ ಹೇಳಿದಂತೆ ಅಕ್ಕ ಒಬ್ಬ ಆಧ್ಯಾತ್ಮಿಕ ವ್ಯಕ್ತಿ. ಆಕೆ ತನ್ನ ಅನುಭವಕ್ಕೆ ಬಂದುದನ್ನೆ, ತನ್ನ ಹೃದಯದಲ್ಲಿ ತಾನೂ ಸಾಕ್ಷಾತ್ಕರಿಸಿಕೊಂಡುದನ್ನೆ ಜನಕ್ಕೆ ಸತ್ಯವೆಂದು ಸಾರಿದಳು. ಮತಧರ್ಮಗಳ ಸೀಮೆಯಲ್ಲಿ ಇದೇ ಚರಮವಾಕ್ಯ. ಯಾವುದು ಅನುಭವವೇದ್ಯವೋ ಯಾವುದು ಹೃದಯ ಗೋಚರವೊ ಅದೇ ಸತ್ಯ. ವೇದ, ಶಾಸ್ತ್ರ, ಪುರಾಣ, ಆಗಮಾದಿಗಳಲ್ಲಿ ಹೇಳಿದ ಮಾತು ತನ್ನ ಜೀವನದಲ್ಲಿ ಅನುಭವಕ್ಕೆ ಬಂದಾಗ ಮಾತ್ರ ಸತ್ಯ. ಅನುಭವಕ್ಕೆ ಬಾರದ ಬರಿಯ ಪುಸ್ತಕದ ಮಾತಾದರೆ ಅದು ಅಕ್ಕ ಅಂದಂತೆ ಕೊಟ್ಟಣವ ಕುಟ್ಟಿದಂತೆಯೆ. ಹೃದಯದಲ್ಲಿ ಆತ್ಮಸಾಕ್ಷಾತ್ಕಾರವನ್ನು ಪಡೆದು ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸಲು ಮನಸ್ಸನ್ನು ಏಕಾಗ್ರದಲ್ಲಿ ನಿಲ್ಲಿಸಿದರೆ ಸಾಕು. ಅಂತಹ ನಿಶ್ಚಲ ಸುಸ್ಥಿರ ನಿಷ್ಠೆ ಆವಶ್ಯಕ. ಆ ಧೀರ ಸಂಯಮವನ್ನೆ ಅಕ್ಕ ತನ್ನ ಜೀವನದ ಸಂದೇಶವೆಂಬಂತೆ ಜನಕ್ಕೆ ಉಸುರಿ ಹೋಗಿದ್ದಾಳೆ.

ಹೇಳುವ ವಿಷಯದ ಭಾವ ತೀವ್ರವಾದಾಗ, ಕಲ್ಪನೆ ಉಜ್ವಲವಾದಾಗ ಕಾದಹಾಲು ಕೆನೆಗಟ್ಟುವಂತೆ ಅನುಭವ ಕೆನೆಗಟ್ಟಿ ನಿಲ್ಲುವ ಕಾವ್ಯ, ಮತ, ತತ್ವ ಇವುಗಳ ತ್ರಿವೇಣಿ ಸಂಗಮವೆ ಈ ವಚನಗಳಲ್ಲಿ ಆದಂತೆ ಕಂಡುಬರುತ್ತದೆ. ತೋರಿಕೆಗೆ ಕಾಣುವ ಮರಳ ರಾಶಿಯ ತಳದಲ್ಲಿ ನಿರ್ಮಲೋದಕದ ಗಂಗೆ ಇರುವಂತೆ, ಈ ವಚನದಲ್ಲಿ ತೋರಿಕೆಗೆ ಕಾಣುವ ಮತತತ್ವಗಳ ಮರಳ ಮರೆಯಲ್ಲಿ ಕಾವ್ಯರಸ ಗಂಗೆ ಹರಿಯುತ್ತದೆ. ತಲಪರಿಗೆಯ ಪಾತ್ರದಲ್ಲಿ ತೋರಿಕೆಯ ಮರಳನ್ನು ತೋಡಿದ ಮಾತ್ರಕ್ಕೆ ನೀರು ಹೊರಡುವಂತೆ ಇಲ್ಲಿಯಾದರೂ ತೋರಿಕೆಯ ಮತತತ್ವದ ಮರಳು ಓರೆಯಾದ ಒಡನೆಯೇ ಈ ಕಾವ್ಯರಸ ಗಂಗೆಯ ನಿರ್ಮಲ ನಿರ್ಝರ ಉಕ್ಕಿ ಬರುತ್ತದೆ.

ಕವಿ, ಹುಚ್ಚ, ಪ್ರೇಯಸಿ ಈ ಮೂವರೂ ಒಂದೇ ವಿಧವಾದ ರಾಗಸಂಸ್ಕಾರ ಉಳ್ಳವರು ಎನ್ನುವ ಮತವಿದೆ. ಅಕ್ಕಮಹಾದೇವಿಯಲ್ಲಿ ಈ ಮೂವರ ಮಹಿಮೆಯನ್ನೂ ಕಾಣಬಹುದು. ಆಕೆ ಕವಿ; ಈ ಕವಿತೆ ವೀರಶೈವ ಮತಧರ್ಮಗಳ ಸ್ಫೂರ್ತಿಯಿಂದ ಉಕ್ಕಿದ ಕವಿತೆ. ಆಕೆ ಹುಚ್ಚಿ, ಈ ಹುಚ್ಚು ಆಧ್ಯಾತ್ಮದ ರೀತಿಯಲ್ಲಿ ಮಾತ್ರ. ಆಕೆ ಪ್ರೇಯಸಿ, ಈ ಪ್ರೇಮ ಪಾರಲೌಕಿಕ ಶೃಂಗಾರದ ರೀತಿಯಲ್ಲಿ ಮಾತ್ರ.

ಇಲ್ಲಿ ಕಾವ್ಯ ಅನುಭಾವ ಪ್ರೇಮ ಈ ಮೂರೂ ಮುಪ್ಪುರಿಗೊಂಡಿವೆ. ಒಂದರಿಂದ ಒಂದನ್ನು ಬೇರೆ ನೋಡುವುದಕ್ಕಿಂತ ಮೂರನ್ನೂ ಒಟ್ಟಿಗೆ ನೋಡುವುದೇ ಲೇಸು.

## ೪. ಸಮಾಪ್ತಿ

ಅಕ್ಕಮಹಾದೇವಿ ಒಂದು ಜೀವ, ಒಂದು ದೇಹ ಎಂದು ಭಾವಿಸಿದರೆ ಅದು ನಮ್ಮ ಸಣ್ಣ ಭಾವನೆಯಾಗುತ್ತದೆ. ಅನುಭವಿಗಳ ದೊಡ್ಡ ಭಾವನೆಯಲ್ಲಿ ಹೇಳುವುದಾದರೆ ಆ ಜೀವ ಕೇವಲ ಜೀವವಲ್ಲ. ಜ್ಯೋತಿ ಎನ್ನಬೇಕು. ಆ ದೇಹ ಕೇವಲ ದೇಹವಲ್ಲ, ಹಣತೆ ಎನ್ನಬೇಕು ದೇಹದ ಹಣತೆಯಲ್ಲಿ ಜೀವನದ ಜ್ಯೋತಿ ಉರಿದು ಆಧ್ಯಾತ್ಮದ ಬೆಳಕಿನಿಂದ ತಾನೂ ಬೆಳಗಿ ಇತರರಿಗೂ ಬೆಳಕಾಗಿ ಕೊನೆಗೆ ಜಗಜ್ಯೋತಿಯಲ್ಲಿ ಐಕ್ಯವಾದ ಜೀವಪ್ರಭೆ ಅಕ್ಕನದು. ಅದು ಸ್ವಯಂಪ್ರಭೆ. ಶ್ರೀಶೈಲದ ಗಿರಿಗಹ್ವರಗಳನ್ನು ಬೆಳಗಿದ ಆ ಸ್ವಯಂಪ್ರಭೆ ಇಂದು ಮತ್ತೆ ಕಾಣಿಸಿಕೊಳ್ಳಲಿ. ಅಂಧತಮಸ್ಸಿನ ಅಸೂರ್ಯ ಲೋಕದಲ್ಲಿ ನರಳುತ್ತಿರುವ ಕನ್ನಡಿಗರ ಹೃದಯ ಗಹ್ವರಗಳನ್ನು ಬೆಳಗಲಿ.

ಬಸವನಂತಹ ಅಣ್ಣ, ಮಹಾದೇವಿಯಂತಹ ಅಕ್ಕ, ಅವರ ಸಮಕಾಲಿಕ ವ್ಯಕ್ತಿಗಳಿಗೆ ನಿಜವಾದ ಅಣ್ಣ ಅಕ್ಕಂದಿರಾಗಿ ಬಾಳಿದರು. ಇವರ ಬಾಳುವೆಯ ಬೆಳಕಿನಲ್ಲಿ ಅಂದಿನ ತಮ್ಮ ತಂಗಿಯರು ತಮ್ಮ ದಾರಿಯನ್ನು ತಾವು ಕಂಡುಕೊಂಡರು. ಈ ಹೊತ್ತು ಧರ್ಮ, ಮತ, ತತ್ವ, ನೀತಿ, ಆಧ್ಯಾತ್ಮಿಕ ಅನುಭಾವ ಇವುಗಳ ಪುನರ್ಯೋಜನೆಯಲ್ಲಿ ದಾರಿಗೆಟ್ಟು ಕನ್ನಡಜನ ಮತ್ತಿಂತಹ ಅಣ್ಣ ಅಕ್ಕಂದಿರ ಹುಟ್ಟಿಗಾಗಿ ಕಾದಿದೆ. ಇವರ ಹುಟ್ಟು ಸಿದ್ಧಿಸಿ ತಪಸ್ಸು ಫಲಿಸಿ ನಮ್ಮ ನಾಡು ನುಡಿಗಳನ್ನು ಇವರು ಮತ್ತೆ ಬೆಳಗುವಂತಾಗಲಿ. ಹೆರರ ನಾಡು ನುಡಿಗಳ ಮೇಲೂ ಈ ಬೆಳಕು ಬೀಳುವಂತಾಗಲಿ.

ಪುರಾವಶೇಷಗಳು